V SERVE V CARE

# SSLC 2022 - 23

## SPECIAL PACKAGE FOR FINAL EXAM

## KANNADA II LANGUAGE

# ಒಣ ಮರದ ಗಿಳಿ

**ಕವಿ ಕೃತಿ ಪರಿಚಯ:**

ಅ.ರಾ. ಮಿತ್ರ

ಸ್ಥಳ– ಮಂಡ್ಯ ಜಿಲ್ಲೆ ಅಕ್ಕಿ ಹೆಬ್ಬಾಳು

ಕಾಲ– 1935

ಕೃತಿ– ಛಂದೋ ಮಿತ್ರ ಒಳನೋಟಗಳು

ಪ್ರಶಸ್ತಿ– ಕಾವ್ಯಾನಂದ ಮತ್ತು ವರ್ಧಮಾನ ಪ್ರಶಸ್ತಿ

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ **ಬೇ**ಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?

ಅಥವಾ

ಬೇಡನು ಏಕೆ ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು?

ಉ: ಬೇಡನು ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನು ಬಿಡುತ್ತಿದ್ದನು.

೨ ವಿಷದ ಬಾಣವು ಮರಕ್ಕೆ ಏಕೆ ತಗುಲಿತು?

ಉ: ಜಿಂಕೆಯು ಹಾರಿ ತಪ್ಪಿಸಿಕೊಂಡಿದ್ದರಿಂದವಿಷದ ಬಾಣವು ಮರಕ್ಕೆ ತಗುಲಿತು.

೩ ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?

ಉ: ಮರವು ಒಣಗಿ ನಿಂತಿತು.

೪ ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?

ಉ: ಇಂದ್ರನು ಒಂದು ವರವನ್ನು ನೀಡುವ ಮೂಲಕ ಸಂತೋಷ ಪ್ರಕಟಿಸಿದನು.

೫ ಗಿಳಿಯು ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

ಉ: ಗಿಳಿಯತತ್ವನಿಷ್ಠೆಯನ್ನು ಇಂದ್ರನು ಮೆಚ್ಚಿಕೊಂಡನು.

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ**

೧ ಸಾಮಾನ್ಯವಾದ ಲೋಕ ವರ್ತನೆ ಯಾವುದು?

ಉ: ಸುಖದಲ್ಲಿರುವಾಗ ಜೊತೆಯಲ್ಲಿದ್ದು ಕಷ್ಟಕಾಲದಲ್ಲಿ ಅವರಿಂದ ದೂರವಾಗುವುದು ಸಾಮಾನ್ಯವಾದ ಲೋಕವರ್ತನೆ.

೨ ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?

ಉ: ಒಣಗಿದ ಮರವು ಮೊದಲಿನಂತೆ ಹಸಿರನ್ನು ಹಾಗೂ ಹೂ ಹಣ್ಣನ್ನು ನೀಡುವ ಮರವಾಗಲಿ ಎಂಬ ವರ ಕೇಳಿತು.

೩ ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?

ಉ: ಈ ಮರವು ಒಂದು ಕಾಲದಲ್ಲಿ ನೆರಳು, ಹೂ ,ಹಣ್ಣನ್ನು ನೀಡಿದೆ ಆದ್ದರಿಂದ ಮರವನ್ನು ಬಿಟ್ಟು ಹೋಗಲಿಲ್ಲ ಎಂದು ಸಮರ್ಥಿಸಿತು.

೪ ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದುದು ಏಕೆ?

ಉ: ಒಣಗಿದ್ದ ಮರದಲ್ಲಿ ವಾಸವಾಗಿದ್ದ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.

**ಸಂದರ್ಭದೊಡನೆ ವಿವರಿಸಿ**

೧ ಇಂಥಾ ಒಣ ಮರದಲ್ಲಿ ಏಕೆ ವಾಸಮಾಡುತ್ತಿದ್ದೀಯಾ!

ಈ ಮಾತನ್ನು ಅ.ರಾ.ಮಿತ್ರ ಬರೆದಿರುವ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಇಂದ್ರನು ಗಿಳಿಯಲ್ಲಿ ಕೇಳಿದನು.

ಒಣಗಿದ ಮರದಲ್ಲಿದ್ದ ಗಿಳಿಯನ್ನು ಕಂಡು ಇಂದ್ರನು ಈ ಮೇಲಿನ ಮಾತನ್ನು ಹೇಳಿದನು.

೨ ಆದರ ಈಗಿನ ಸ್ಥಿತಿಯನ್ನು ನಾನು ನೋಡಲಾರೆ

ಈ ಮಾತನ್ನು ಅ.ರಾ.ಮಿತ್ರ ಬರೆದಿರುವ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಗಿಳಿಯು ಇಂದ್ರನಿಗೆ ಹೇಳಿತು.

ಉಪಕಾರ ಮಾಡಿದ ಮರವು ಒಣಗಿರುವುದನ್ನು ನೋಡಿ ಗಿಳಿಯು ಈ ಮೇಲಿನ ಮಾತನ್ನು ಹೇಳಿತು.

೩ ಏನಾದರೂ ವರವನ್ನು ಕೇಳು ಕೊಡುತ್ತೇನೆ.

ಈ ಮಾತನ್ನು ಅ.ರಾ.ಮಿತ್ರ ಬರೆದಿರುವ ಒಣಮರದ ಗಿಳಿ ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಇಂದ್ರನು ಗಿಳಿಗೆ ಹೇಳಿದನು.

ಗಿಳಿಯ ತತ್ವನಿಷ್ಠೆಯ ಗುಣವನ್ನು ನೋಡಿ ಇಂದ್ರನು ಈ ಮೇಲಿನ ಮಾತನ್ನು ಹೇಳಿದನು.

**ಏಳೆಂಟು ವಾಕ್ಯದಲ್ಲಿ ಉತ್ತರಿಸಿರಿ**

೧ ಗಿಳಿಯು ಪರಹಿತಾಕಾಂಕ್ಷಿ ಎನಿಸಿಕೊಂಡಿದ್ದು ಹೇಗೆ ವಿವರಿಸಿ?

ಉ: ಮರವು ಒಣಗಿ ನಿಂತರೂ ಗಿಳಿಯು ಅದನ್ನು ಬಿಟ್ಟು ಹೋಗಲಿಲ್ಲ.ಈ ಮರವು ಹಲವು ವರ್ಷಗಳಿಂದ ಹಸಿರು, ನೆರಳು, ಹಣ್ಣು ನೀಡಿದೆ. ಮರವನ್ನು ಮೊದಲಿನಂತೆ ಮಾಡುವ ವರವನ್ನು ಇಂದ್ರನಲ್ಲಿ ಕೇಳಿ ಪಡೆಯಿತು ಹೀಗೆ ಗಿಳಿಯು ಸುಖದಲ್ಲಿರುವಾಗ ಜೊತೆಗಿದ್ದು ಕಷ್ಟಕಾಲದಲ್ಲಿ ಬಿಟ್ಟು ಹೋಗದೆ ಪರಾಹಿತಾಕಾಂಕ್ಷಿ ಎನಿಸಿತು.

**************

# ಅಸಿ– ಮಸಿ ಕೃಷಿ

## ಕವಿ ಕೃತಿ ಪರಿಚಯ:

- ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು,
- ಸ್ಥಳ– ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕಿನ ಹೆಡಿಯಾಳಿ ಎಂಬಲ್ಲಿ ಜನಿಸಿದರು.
- ಕಾಲ– 1951
- ಕೃತಿ–ವ್ಯಕ್ತಿತ್ವ, ಕಾಯಕ, ಜೀವನ ದರ್ಶನ,
- ಪ್ರಶಸ್ತಿ –ರಾಜೋತ್ಸವ ಪ್ರಶಸ್ತಿ ಪಾಲ್ ಹ್ಯಾರೀಸ್ ಪ್ರಶಸ್ತಿ

## ಒಂದು ವಾಕ್ಯದಲ್ಲಿ ಉತ್ತರಿಸಿರಿ

೧ ಅಸಿ ಮಸಿ ಎಂದರೇನು? ಅಥವಾ ಅಸಿ ಮಸಿ ಪದದ ಅರ್ಥವೇನು?

ಉ: ಅಸಿ ಎಂದರೆ ಯುದ್ದ ,ಮಸಿ ಎಂದರೆ ಸಾಹಿತ್ಯ.

೨ ಈ ನಾಡಿನ ಬೆನ್ನೆಲುಬು ಯಾರು?

ಉ: ರೈತ ಈ ನಾಡಿನ ಬೆನ್ನೆಲುಬು.

೩ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?.

ಉ: ಪಾಲ್ ಹ್ಯಾರಿಸ್ ಪ್ರಶ್ನಸ್ತಿಯನ್ನು ನೀಡಿದೆ.

೩ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?

ಉ: ರಂಗ ಜಂಗಮ ಎಂದು ಖ್ಯಾತರಾಗಿದ್ದಾರೆ.

## ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ

೧ ಪೆನ್ನು ಖಡ್ಗಗಿಂತ ಹರಿತವಾದುದು ಏಕೆ? ಅಥವಾ ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು?

ಉ: ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನಿಂದ ಸಾಧಿಸಬಹುದು. ಕತೆ, ಕಾದಂಬರಿ, ಕವನ ಹಲವರ ಬದುಕನ್ನು ಬದಲಿಸಬಹುದು. ಒಂದು ಸರಕಾರವನ್ನು ಬೀಳಿಸಿ ಇನ್ನೊಂದು ಸರಕಾರವನ್ನು ತರಬಹುದು.

೨ ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

- ನಿಸರ್ಗದ ಜೊತೆ ಹೋರಾಟ
- ಮಳೆ ಬಾರದೆ ಇರುವುದು
- ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದು.
- ಕ್ರಿಮಿಕೀಟಗಳ ಹಾವಳಿ.
- ಬೀಜಗಳ ಕೊರತೆ
- ಅತಿಯಾದ ಮಳೆ

೩ ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?

ಉ: ಸೈನಿಕರು ಪ್ರಬಲರಾಗಿದ್ದಾಗ ನಮ್ಮ ದೇಶವನ್ನು ರಕ್ಷಣೆ ಮಾಡಲು ಸಾಧ್ಯ ಇಲ್ಲದಿದ್ದರೆ ಬೇರೆ ದೇಶದವರು ಆಕ್ರಮಣ ಮಾಡುತ್ತಾರೆ.

**ಸಂದರ್ಭದೊಡನೆ ವಿವರಿಸಿ**

೧ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು

ಈ ಮಾತನ್ನು ಅಸಿ ಮಸಿ ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ.ಸರ್ವಜ್ಞ ಕವಿಯು ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

೨ ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ

ಈ ಮಾತನ್ನು ಅಸಿ ಮಸಿ ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ.

ರೈತರು ಎಲ್ಲಾ ಸಮಯದಲ್ಲಿ ಕೆಲಸವನ್ನು ತಪ್ಪದೆ ಮಾಡುತ್ತಾರೆ ಎಲ್ಲರಿಂದ ಮೋಸ ಹೋಗುತ್ತಾರೆ. ಆದರೆ ಅವರು ಯಾರಿಗೂ ಮೋಸ ಮಾಡುವುದಿಲ್ಲ.

೩ ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಾರೆ.

ಈ ಮಾತನ್ನು ಅಸಿ–ಮಸಿ ಕೃಷಿ ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಲೇಖಕರು ಹೇಳುತ್ತಾರೆ.

## ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿರಿ

೧ ದೇಶದ ಪ್ರಗತಿಯಲ್ಲಿ ಸಾಹಿತಿಗಳಪಾತ್ರವೇನು?

ಉ:ಪೆನ್ನು ಖಡ್ಗಗಿಂತ ಹರಿತವಾದುದು .ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಲೇಖನಿಯ ಮೂಲಕ ಸಾಧಿಸಬಹುದು. ಒಂದು ಸರ್ಕಾರವನ್ನುಉರುಳಿಸಿ ಮತ್ತೊಂದು ಸರ್ಕಾರವನ್ನು ತರಬಹುದು.

೨“ಕೃಷಿಕ ನಾಡಿನ ಬೆನ್ನೆಲುಬು ಈ ಮಾತನ್ನು ಸಮರ್ಥಿಸಿರಿ.”

ಉ:“ಕೃಷಿಕ ನಾಡಿನ ಬೆನ್ನೆಲುಬು”. ಎಂಬ ಮಾತು ಅರ್ಥಪೂರ್ಣವಾಗಿದೆ .

ಕೃಷಿಕ ಕೃಷಿ ಮಾಡದೆ ಇದ್ದರೆ ನಾವೆಲ್ಲ ಕಷ್ಟಪಡುತ್ತೇವೆ.ತಿನ್ನಲು ಆಹಾರವಿಲ್ಲದೆ ನರಳುತ್ತೇವೆ. ಅಕ್ಕಿ, ರಾಗಿಯನ್ನು ಕಾರ್ಖಾನೆಯಲ್ಲಿ ತಯಾರಿಸಲು ಸಾಧ್ಯವಿಲ್ಲ ಇದಕ್ಕೆಲ್ಲ ಭೂಮಿಯೇ ಬೇಕು.

**********

# <u>ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ</u>

ಲೇಖಕರ ಪರಿಚಯ:

ರಮೇಶಗೌಡ ಎಂ.ಕೆ ಅವರು 1975ಧಾರವಾಡದಲ್ಲಿ ಜನಿಸಿದರು.

ಗಾನಯೋಗಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳು,

ಕೃತಿ: ರೂಪ ಬಯಲು

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಪುಟ್ಟರಾಜರ ತಂದೆ ತಾಯಿಗಳ ಹೇಸರೇನು?

ಉ: ತಂದೆ ರೇವಣ್ಣಯ್ಯ, ತಾಯಿ ಸಿದ್ಧಮ್ಮ.

೨ ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?

ಉ: ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.

೩ ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?

ಉ: ತನ್ನ ಮಗನನ್ನು ಮನೆಗೆ ಕಳುಹಿಸಿ ಕೊಡುವಂತೆ ಬೇಡಿಕೊಂಡಳು.

೪ ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?

ಉ: ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು.

೫ ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ? ಅಥವಾ ಪುಟ್ಟರಾಜರು ಖಾದಿ ಬಟ್ಟೆ ತೊಡುವ ಮೂಲಕ ಯಾವ ಆಂದೋಲನಕ್ಕೆ ಕೈ ಜೋಡಿಸಿದರು?

ಉ:-ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸಿದ್ದರಿಂದ ಖಾದಿ ಬಟ್ಟೆ ತೊಟ್ಟರು.

**<u>ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:</u>**

೧ ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದು ಕೊಂಡದ್ದು ಹೇಗೆ?

ಉ: ಹುಟ್ಟಿದ ಆರು ತಿಂಗಳಿಗೆ ಪುಟ್ಟರಾಜನಿಗೆ ಕಣ್ಣು ಬೇನೆ ಬಂದಿತು. ನಾಟಿ ವೈದ್ಯರು ಕಣ್ಣಿಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕು ಎಂದು ಹೇಳಿದರು. ಮುಟ್ಟಿಸುವಾಗ ಹುಳು ಕೈ ಜಾರಿ ಕಣ್ಣಿನ ಒಳಗೆ ಬಿತ್ತು ಹೀಗೆ ಪುಟ್ಟಯ್ಯನವರು ಕಣ್ಣುಗಳನ್ನು ಕಳೆದುಕೊಂಡರು.

೨ ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?

ಉ: ಪುಟ್ಟರಾಜರು ಮಾವನವರ ಜೊತೆಗೆ ಪಂಚಾಕ್ಷರಿ ಗವಾಯಿಗಳ ಕ್ಯಾಂಪ್‌ಗೆ ಬಂದು ಅವರ ಶಿಷ್ಯತ್ವವನ್ನು ಪಡೆದರು.

೩ ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಮನಸ್ಥಿತಿ ಹೊಂದಿದ್ದನು?

ಉ: ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು, ಅವರ ನುಡಿಯೇ ನನಗೆ ಮಂತ್ರ, ನಡೆಯೇ ಆಚಾರ ಎಂಬ ಮನಸ್ಥಿತಿ ಹೊಂದಿದನು.

೪ ತಾಯಿ ಸಿದ್ದಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು?

ಉ: ನಿನ್ನಂಥ ಒಳ್ಳೆಯ ಮಗನನ್ನು ಪಡೆದುದು ನನ್ನ ಭಾಗ್ಯ. ಹೆಂಡತಿ ಮಕ್ಕಳು ಸಂಸಾರದಲ್ಲಿ ನಿನಗೆ ಇಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗು, ಗುರುಗಳ ಜೊತೆ ಇರು ಎಂದು ಆಶೀರ್ವದಿಸಿದಳು.

೫ ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?

ಉ: ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯಲ್ಲಿ ಪೇಠ ಹಣೆಯಲ್ಲಿ ಮೂರು ನಾಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೈಯಲ್ಲಿ ಉದ್ದನೆಯ ಬೆತ್ತ.

೬ ಪುಟ್ಟರಾಜನಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?

ಉ: ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಪ್ರಶಸ್ತಿಗಳು ದೊರೆತಿವೆ.

**ಸಂದರ್ಭದೊಡನೆ ವಿವರಿಸಿ**

೧“ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣೂ ಹೋಗಿ ಬಿಟ್ಟವು”

ಈ ಮಾತನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ ‘ಗಾನ ಯೋಗಿ ಪಂಡಿತ ಪುಟ್ಟರಾಜ ಗವಾಯಿ’ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ಹುಟ್ಟಿದ ಆರು ತಿಂಗಳಿಗೆ ಪುಟ್ಟರಾಜನಿಗೆ ಕಣ್ಣು ಬೇನೆ ಬಂದಿತು. ನಾಟಿ ವೈದ್ಯರು ಕಣ್ಣಿಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕು ಎಂದು ಹೇಳಿದರು ಮುಟ್ಟಿಸುವಾಗ ಹುಳು ಕೈ ಜಾರಿ ಕಣ್ಣಿನ ಒಳಗೆ ಬಿತ್ತು. ಹೀಗೆ ಪುಟ್ಟಯ್ಯನವರು ಕಣ್ಣುಗಳನ್ನು ಕಳೆದುಕೊಂಡರು.

೨ ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ.

ಈ ಮಾತನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ ‘ಗಾನ ಯೋಗಿ ಪಂಡಿತ ಪುಟ್ಟರಾಜ ಗವಾಯಿ’ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ. ಈ ಮಾತನ್ನು ಪುಟ್ಟರಾಜರ ಮಾವ ಪುಟ್ಟರಾಜರಿಗೆ ಹೇಳಿದರು.

೩ ಅವನು ಬಂದರೆ ಕರೆದು ಕೊಂಡು ಹೋಗು ತಾಯಿ.

ಈ ಮಾತನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ 'ಗಾನ ಯೋಗಿ ಪಂಡಿತ ಪುಟ್ಟರಾಜ ಗವಾಯಿ'ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ. ಈ ಮಾತನ್ನು ತಾಯಿಯು ಮಗನನ್ನು ಮನೆಗೆ ಕಳುಹಿಸು ಎಂದು ಕೇಳಿದಾಗ ಗುರುಗಳು ಮೇಲಿನಂತೆ ಹೇಳಿದರು.

೪ ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ

ಈ ಮಾತನ್ನು ರಮೇಶಗೌಡ ಎಂ.ಕೆ. ರವರು ಬರೆದಿರುವ 'ಗಾನ ಯೋಗಿ ಪಂಡಿತ ಪುಟ್ಟರಾಜ ಗವಾಯಿ'ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

ತಾಯಿಯು ಮಗನನ್ನು ಮನೆಗೆ ಕಳುಹಿಸಲು ಕೇಳಿಕೊಂಡಾಗ ಪುಟ್ಟರಾಜರು ಈ ಮಾತನ್ನು ಹೇಳಿದರು.

**ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿರಿ.**

೧ ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ.

ಉ: ಬಾಲಕ ಪುಟ್ಟಯ್ಯ ಒಮ್ಮೆ ಮನೆಯಲ್ಲಿ ಯಾರು ಇಲ್ಲದಾಗ ಮಾವನ ಹಾರ್ಮೋನಿಯಂ ನುಡಿಸಿದರು. ಅದನ್ನು ಕೇಳಿದ ಜನರು ಮನೆಯ ಒಳಗೆ ಮತ್ತು ಹೊರಗೆ ಸೇರಿದರು. ಮಾವ ಮನೆಗೆ ಬಂದಾಗ ಜನರನ್ನು ನೋಡಿ ಅಚ್ಚರಿಗೊಂಡರು, ಹಾರ್ಮೋನಿಯಂ ನುಡಿಸುವುದನ್ನು ನಿಲ್ಲಿಸಿಬಾಲಕ ಪುಟ್ಟಯ್ಯ ಅತ್ತರು.

**********

# ಹಕ್ಕಿ ಗೂಡುಗಳ ನಿಗೂಢ ಜಗತ್ತು

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಸಸ್ತನಿಗಳ ಆಶ್ರಯ ತಾಣಗಳು ಯಾವುವು?

ಉ: ಗುಹೆ, ಪೊಟರೆ, ಗೂಡು ಬಿಲ.

೨ ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

ಉ: ಸ್ಪರ್ಶ ಸಂಜೀವಿನಿಯ ಪಾಠವನ್ನು ಹೇಳುತ್ತವೆ.

೩ ಹಕ್ಕಿ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

ಉ: ಕಲಾವಿದನ ಸೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ ಇದೆ.

೪ ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?

ಉ: ಹಕ್ಕಿಯ ದೇಹ ರಚನೆ, ಪರಿಸರದ ವೈಲಕ್ಷಣಗಳು, ಬಲಿ–ಬೇಟೆ ಸಂಬಂಧ.

೫ ಅಮೇರಿಕಾದಲ್ಲಿ ಗ್ರ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

ಉ: ಗಾಲ್ಫ್ ಚೆಂಡು, ನೀಲಿ ಸೀಸೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣ ಬೊಂಬೆಯಿಂದ ಅಲಂಕರಿಸಿತ್ತು.

**ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ**

೧ ಹಕ್ಕಿ ಗೂಡಿನ ವಿಶೇಷತೆಗಳೇನು?

ಉ: ಹಕ್ಕಿಗಳು ಕೀಟ, ಹಾವು, ಸಸ್ತನಿಗಳಿಗಿಂತ ಸುಂದರವಾಗಿ ಗೂಡು ಕಟ್ಟುತ್ತವೆ, ಒಳ ಗೋಡೆಯನ್ನು ಪ್ಲಾಸ್ಟರ್ ಮಾಡುತ್ತದೆ.

೨ ಹಕ್ಕಿ ಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?

ಉ: ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಸಂತಸದ ದನಿಯಿದೆ. ಕಲಾವಿದನ ಸೋಪಜ್ಞತೆ ವಿಜ್ಞಾನಿಯ ತಂತ್ರಜ್ಞಾನವಿದೆ.

೩ ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

ಉ: ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ ಪ್ರವಾಹಗಳ ವಿರುದ್ಧ ಬದುಕಲು, ಮೊಟ್ಟೆ ಮರಿಗಳನ್ನು ರಕ್ಷಿಸಲು ಗೂಡನ್ನು ನಿರ್ಮಿಸುತ್ತವೆ.

೪ ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟ ಬಲ್ಲವು?

ಉ: ದ್ವೀಪ, ಗಿರಿ, ಶಿಖರ, ಕಾಡು, ಎತ್ತರದ ಮರ, ಧ್ರುವ ಪ್ರದೇಶಗಳಲ್ಲಿ ಗೂಡನ್ನು ಕಟ್ಟ ಬಲ್ಲವು.

೫ ಹಕ್ಕಿಗಳು ಗೂಡುಗಳನ್ನು ಯಾವ ರೀತಿ ಅಲಂಕರಿಸುತ್ತದೆ?

ಉ: ಬಣ್ಣ ಬಣ್ಣದ ಹೂವಿನ ದಳ, ಹೊಳೆವ ಕಲ್ಲು, ಬಣ್ಣದ ಗಾಜಿನ ಚೂರು, ಬಟ್ಟೆಯ ಚಿಂದಿ, ಗೊಂಬೆಯನ್ನು ತಂದು ಅಲಂಕರಿಸುತ್ತದೆ.

**ಸಂದರ್ಭದೊಡನೆ ವಿವರಿಸಿ**

೧ ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ.

ಈ ವಾಕ್ಯವನ್ನು "ಹಕ್ಕಿಗೂಡುಗಳ ನಿಗೂಢ ಜಗತ್ತು" ಎಂಬ ಪಾಠದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಲೇಖಕರು ಹೇಳುತ್ತಾರೆ.

೨.ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಪಾಠ ಶಾಲೆ ಅದು"

ಈ ಮಾತನ್ನು "ಹಕ್ಕಿ ಗೂಡುಗಳ ನಿಗೂಢ ಜಗತ್ತು" ಎಂಬ ಪಾಠದಿಂದ ಆರಿಸಲಾಗಿದೆ.

ಈ ವಾಕ್ಯದಲ್ಲಿ ಕಲಾವಿದನ ಸೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನವನ್ನು ಹಕ್ಕಿ ಗೂಡಿನಲ್ಲಿ ಕಾಣಬಹುದು ಎಂದು ಹೇಳುವಾಗ ಈ ಮಾತು ಬಂದಿದೆ.

೩ ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ.

ಈ ಮಾತನ್ನು ಹಕ್ಕಿ ಗೂಡುಗಳ ನಿಗೂಢ ಜಗತ್ತು ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಲೇಖಕರು ಹಕ್ಕಿ ಗೂಡಿನಕುರಿತು ಹೇಳಿದ್ದಾರೆ.

**********

# **ಕಾಫೀ ಕಪ್ಪು**

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಹೆಡ್‌ಮಾಸ್ಟರರು ಸಂತೋಷಗೊಂಡದ್ದು ಏಕೆ?

ಉ: ಹಳೆಯ ವಿದ್ಯಾರ್ಥಿಗಳನ್ನು ಕಂಡು ಸಂತೋಷಗೊಂಡರು.

೨ ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

ಉ: ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

೩ ಗುರು ಹೇಳಿದಂತೆ ಕಾಫಿ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕವಾಗಿದೆ?

ಉ: ಕಾಫಿ ಜೀವನ ಇದ್ದಂತೆ,ಕಪ್ಪು ಹಣ ,ಅಂತಸ್ತು ,ಅಧಿಕಾರದ ಪ್ರತೀಕವಾಗಿದೆ.

೪ ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?

ಉ: ಉತ್ತಮವಾದುದ್ದನ್ನು ಪಡೆಯಬೇಕು ಎನ್ನುವ ಆಸೆ ತೊಂದರೆಗಳಿಗೆ ಕಾರಣ.

೫ ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?

ಉ: ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುವುದು ದುರ್ದೈವದ ಸಂಗತಿ.

೬ ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು?

ಉ: 'ಕರುಣಾಳು ಬಾ ಬೆಳಕೆ '

**ಮೂರು ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.**

೧ ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?

ಉ: ಒಂದಲ್ಲ ಒಂದು ಸಮಸ್ಯೆ ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತಿದೆ ರೂಪಾಯಿ ಬೆಲೆ ಕುಸಿಯುತ್ತಿದೆ. ಹಣಕ್ಕೆ ಬೆಲೆ ಇಲ್ಲ ಎಂದು ಹೇಳಿಕೊಳ್ಳುತ್ತಿದ್ದರು.

೨ ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?

ಉ: ಪ್ಲಾಸ್ಟಿಕ್, ಗಾಜು, ಸ್ಟೀಲು ,ಚೈನಾ ಕಪ್ಪುಗಳಿದ್ದವು.

೩ ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?

ಉ:ಭಗವಂತ ನಮಗೆ ಜೀವನ ಎನ್ನುವ ಕಾಫಿ ಕೊಟ್ಟಿದ್ದಾನೆ. ಅವನು ಕೊಡುವುದು ಕಾಫಿ ಮಾತ್ರ ಕಪ್ಪುಗಳನ್ನಲ್ಲ. ಜೀವನದಲ್ಲಿ ಸಿಕ್ಕಿರುವುದನ್ನು ಅನುಭವಿಸಬೇಕು ಎಂದರು.

**ಎಳೆಂಟು ವಾಕ್ಯಗಳಲ್ಲಿ ಉತ್ತರಿಸಿರಿ**

೧ ಗುರುಗಳು ಸುಖದ ಜೀವನದ ಪಾಠವನ್ನು ಹೇಗೆ ಮನವರಿಕೆ ಮಾಡಿದರು?

ಉ: ಕಾಫಿ ಎಂದರೆ ಜೀವನ, ಕಪ್ಪುಎನ್ನುವುದು ಹಣ, ಅಂತಸ್ತು, ಅಧಿಕಾರ. ಕಪ್ಪುಗಳಿಗೆ ಮಹತ್ವ ನೀಡದೆ ಜೀವನವೆಂಬ ಕಾಫಿಯನ್ನು ಅನುಭವಿಸಬೇಕೆಂದು ಗುರುಗಳು ಹೇಳಿದರು.

**ಸಂದರ್ಭದೊಡನೆ ವಿವರಿಸಿ**

೧ ಭಗವಂತ ನಿಮಗೆ ಜೀವನ ಎಂಬ ಕಾಫಿ ಕೊಟ್ಟಿದ್ದಾನೆ.

ಈ ಮಾತನ್ನು ಗುರುರಾಜ ಕರ್ಜಗಿಯವರ 'ಕಾಫಿ ಕಪ್ಪು' ಎಂಬ ಪಾಠದಿಂದ ಆರಿಸಲಾಗಿದೆ. ಸುಖ ಜೀವನದ ಪಾಠವನ್ನು ತಿಳಿಸುವಾಗ ಈ ಮಾತನ್ನು ಗುರುಗಳು ವಿದ್ಯಾರ್ಥಿಗಳಿಗೆ ಹೇಳಿದರು.

***********

# ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ

**ಕೆಳಗಿನ ಪ್ರಶ್ನೆಗಳನ್ನು ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧ ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂಗೆ ಟುಸ್ಸೋಡ್ ಎಂಬ ಹೆಸರು ಹೇಗೆ ಬಂತು?

ಉ: ಮೇಡಂ ಟುಸ್ಸೋಡ್ ವ್ಯಾಕ್ಸ್ ಗೊಂಬೆಗಳನ್ನು ಮೊದಲು ಮಾಡಿದ್ದರಿಂದ ಈ ಹೆಸರು ಬಂತು.

೨ ಲಂಡನ್‌ನಲ್ಲಿರುವ ಪ್ರಸಿದ್ದ ವಿಶ್ವವಿದ್ಯಾಲಯಗಳು ಯಾವುವು?

ಉ: ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳು.

೩ ಲಂಡನ್‌ನಲ್ಲಿರುವ ವ್ಯಾಕ್ಸ್ ಮ್ಯೂಸಿಯಂನ್ನು ಯಾವ ಹೆಸರಿನಿಂದ ಕರೆಯುತ್ತಾರೆ?

ಉ: ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಎಂದು ಕರೆಯುತ್ತಾರೆ.

೪ ಲಂಡನ್ ನಗರದ ನಡುವೆ ಹರಿಯುತ್ತಿರುವ ಪ್ರಸಿದ್ಧ ನದಿ ಯಾವುದು?

ಉ: ಥೇಮ್ಸ್ ನದಿ.

೫ ಲಂಡನ್‌ನ ನಿಗೂಢ ಸ್ಥಳ ಯಾವುದು?

ಉ: ಟವರ್ ಆಫ್ ಲಂಡನ್.

**ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ**

೧ ಥೇಮ್ಸ್ ನದಿಯ ಉತ್ತರ ಹಾಗೂ ದಕ್ಷಿಣದ ಭಾಗಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ?

ಉ: ಥೇಮ್ಸ್ ನದಿಯ ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯವುಳ್ಳವರು ವಾಸಿಸುತ್ತಾರೆ ದಕ್ಷಿಣಕ್ಕೆ ಉದ್ಯಮಗಳು,ಫ್ಯಾಕ್ಟರಿಗಳಿವೆ.

೨ ಲಂಡನ್ ಟವರ್ ಬ್ರಿಡ್ಜ್‌ನ ವೈಶಿಷ್ಟ್ಯವೇನು?

ಉ: ಲಂಡನ್ ಟವರ್ ಸಾವಿರ ಟನ್ ತೂಗುತ್ತದೆ, ಹಡಗುಗಳು ಬಂದಾಗ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ.

೩ ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು?

ಉ: ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ.

೪ ಟವರ್ ಆಫ್ ಲಂಡನನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?

ಉ: ರಾಜರು ತಮಗೆ ಆಗದವರನ್ನು ಕೊಲ್ಲಿಸುತ್ತಿದ್ದ ಜಾಗ, ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಯುದ್ಧ ಸಾಮಾಗ್ರಿಗಳನ್ನು ಇಲ್ಲಿ ಇಡಲಾಗಿದೆ. ಆದ್ದರಿಂದ ಇದು ನಿಗೂಢ ಸ್ಥಳ.

**ಎಂಟು– ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

೧ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆ ಏನು?

ಅಥವಾ

ಮೇಣದ ಗೊಂಬೆಗಳ ವಿಶೇಷತೆ ಏನು?

ಉ: ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ಮೇಣದ ಗೊಂಬೆಗಳು ಆಯಾ ವ್ಯಕ್ತಿಗಳನ್ನು ಹೋಲುತ್ತವೆ. ಮೇಡಂ ಟುಸ್ಸೋಡ್ ಈ ಗೊಂಬೆಗಳನ್ನು ಮೊದಲು ಮಾಡಿರುವುದರಿಂದ ಈ ಹೆಸರು ಬಂದಿದೆ. ಶಾರುಕ್ ಖಾನ್, ಅಮೀರ್ಖಾನ್, ಅಮಿತಾಬ್ ಬಚ್ಚನ್ ಮುಂತಾದವರ ಗೊಂಬೆಗಳಿವೆ. ಇವುಗಳನ್ನು ನೋಡಿದರೆ ನಿಜವಾದ ವ್ಯಕ್ತಿಗಳೇ ಎಂದು ಎನಿಸುತ್ತದೆ.

೨ ಥೇಮ್ಸ್ ನದಿಯ ಸುತ್ತ ಮುತ್ತ ಲೇಖಕರು ಕಂಡ ದೃಶ್ಯಗಳಾವುವು?

ಉ: ಹಡಗುಗಳು ಬರುವಾಗ ದಾರಿ ಮಾಡಿ ಕೊಡುವುದನ್ನು ನೋಡಿದರು. ವಾಟರ್ಲೂ ಸೇತುವೆ, ವೆಸ್ಟ್ ಮಿನಿಸ್ಟರ್ ಸೇತುವೆ ಮತ್ತು ಲಂಡನ್ ಸೇತುವೆ ನೋಡಿದರು, ಟವರ್ ಆಫ್ ಲಂಡನ್ ಮತ್ತು ಥೇಮ್ಸ್ ನದಿಯನ್ನು ನೋಡಿದರು.

**ಸಂದರ್ಭದೊಡನೆ ವಿವರಿಸಿ**

೧'ಇವರೆಲ್ಲಬಸ್ಸು ,ರೈಲು ಹಿಡಿಯಲು ತರಾತುರಿಯಿಂದ ಹೊರಟಿದ್ದರು'

ಈ ವಾಕ್ಯವನ್ನು ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಲೇಖಕರು ಲಂಡನ್‌ನ ಜನರ ಬದುಕಿನ ಬಗ್ಗೆ ಹೇಳಿದ್ದಾರೆ.

೨ 'ಲಂಡನ್ ಮಲಗಿ ನಿದ್ರಿಸುತ್ತದೆಯೇ ಎಂದೆನಿಸುತ್ತದೆ'

ಈ ವಾಕ್ಯವನ್ನು ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಎಂಬ ಪಾಠದಿಂದ ಆರಿಸಲಾಗಿದೆ.

ಲಂಡನ್ ನಗರದ ಮಧ್ಯಭಾಗದಿಂದ ಹೊರಗೆ ಬಂದಾಗ ಜನರ ಸಂಖ್ಯೆ ಕಮ್ಮಿಯಾಗುವುದನ್ನು ನೋಡಿ ಹೀಗೆ ಹೇಳುತ್ತಾರೆ.

**********

# ನನ್ನ ಗೋಪಾಲ

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?

ಉ: ಪೂಜೆಗೆ ಹೂಗಳನ್ನು ತರುವುದು ಮುಖ್ಯ ಕೆಲಸ.

೨ ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

ಉ: ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು.

೩ ಗೋಪಾಲನ ಗೆಳೆಯರ ಹೆಸರೇನು?

ಉ: ರಾಮು, ಕಿಟ್ಟಿ, ನಾಣಿ, ಮಾದು ಇವರು ಗೋಪಾಲನ ಗೆಳೆಯರು.

೪ ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?

ಉ: ಬನದ ಗೋಪಾಲ ಶ್ರೀ ಕೃಷ್ಣ , ಅವನ ಕೆಲಸ ದನಕಾಯುವುದು.

೫ ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡತ್ತಿದ್ದನು?

ಉ: ಕಾಡಿನ ದಾರಿಯಲ್ಲಿ ಕತ್ತಲೆ ಇದ್ದ ಕಾರಣ ಭಯಪಡುತ್ತಿದ್ದನು.

೬ ಗೋಪಾಲನು ಹೊಸ ಪಂಚೆಯನ್ನು ಬಯಸುದುದೇಕೆ?

ಉ: ಗೋಪಾಲನ ಹಳೆಯ ಪಂಚೆಯನ್ನು ನೋಡಿ ಗೆಳೆಯರು ನಗುತ್ತಿದ್ದ ಕಾರಣ ಹೊಸ ಪಂಚೆ ಬಯಸಿದ್ದ.

**ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ**

೧ ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?

ಉ: ತಲೆಯ ಮೇಲೆ ಕೀರಿಟ, ನವಿಲು ಗರಿ ,ಕೈಯಲ್ಲಿ ಕೊಳಲು ಇವು ಬನದ ಗೋಪಾಲನ ವೇಷ ಭೂಷಣಗಳು.

೨ ಗೋಪಾಲನು ಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?

ಉ: ಮಲ್ಲಿಗೆಯ ಹೂ, ಸೇವಂತಿಗೆ, ಪರ್ವತ ಬಾಳೆ, ಗೋರಂಟಿಯ ಹೂವಿನಿಂದ ಕೂಡಿದ್ದು, ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ಕಾಣುತ್ತಿತ್ತು. ಹಕ್ಕಿಗಳ ಹಾಡು, ತಂಗಾಳಿ, ಸೂರ್ಯನ ಕಿರಣಗಳು ಸೊಗಸಾಗಿದೆ ಎಂದು ಗೋಪಾಲ ವರ್ಣಿಸಿದನು.

**ಕೆಳಗಿನ ಪ್ರಶ್ನೆಗಳಿಗೆ ಎಂಟು/ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧ ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆ ಏನು?

ಉ: ಗೋಪಾಲ ಕಾಡಿಗೆ ಹೋಗಿ ಹೂಗಳನ್ನು ಕೊಯ್ದು ಬರುತ್ತಾನೆ. ತಾಯಿಗೆ ತಾನು ಕಾಡಿನಲ್ಲಿ ಕೊಯ್ದು ತಂದ ಹೂಗಳನ್ನು ವರ್ಣಿಸುತ್ತಾನೆ. ಹೂಗಳನ್ನು ಅಲ್ಲಿಟ್ಟು ಶಾಲೆಗೆ ಹೋಗು ಎಂದು ಹೇಳುತ್ತಾಳೆ. ಶಾಲೆಯಿಂದ ಬರುವಾಗ ಭಯವಾಗುತ್ತದೆ ಎಂದು ಹೇಳುತ್ತಾನೆ. ಗೋಪಾಲನು ಹೊಸ ಪಂಚೆಯನ್ನು ಕೇಳುತ್ತಾನೆ, ನೂಲು ಮಾರಿ ಉಳಿಸಿದ ಹಣದಿಂದ ಹೊಸ ಪಂಚೆ ಕೊಡುತ್ತಾಳೆ.

೨ ನನ್ನ ಗೋಪಾಲ ಪಾಠದಲ್ಲಿ ಪ್ರಕೃತಿಯನ್ನು ಹೇಗೆ ವರ್ಣಿಸಲಾಗಿದೆ?

ಉ: ಮಲ್ಲಿಗೆಯ ಹೂ, ಸೇವಂತಿಗೆ, ಪರ್ವತಬಾಳೆ, ಗೋರಂಟಿಯ ಹೂವಿನಿಂದ ಕೂಡಿದ್ದು, ಸಾವಿರಾರು ಮಳೆ ಬಿಲ್ಲುಗಳು ಕುಣಿದಂತೆ ಕಾಣುತ್ತಿತ್ತು. ಹಕ್ಕಿಗಳ ಹಾಡು, ತಂಗಾಳಿ, ಸೂರ್ಯನ ಕಿರಣಗಳು ಸೊಗಸಾಗಿದೆ ಎಂದು ಗೋಪಾಲ ವರ್ಣಿಸಿದನು.

**ಸಂದರ್ಭದೊಡನೆ ವಿವರಿಸಿ**

೧ ಸಾವಿರಾರು ಮಳೆಬಿಲ್ಲುಗಳು ಕುಣಿದಂತೆ ತೋರುತ್ತಿತ್ತು.

ಈ ಮಾತನ್ನು ಕುವೆಂಪುರವರು ಬರೆದಿರುವ ನನ್ನ ಗೋಪಾಲ ಎಂಬ ಪಾಠದಿಂದ ಆರಿಸಲಾಗಿದೆ. ಈ ವಾಕ್ಯವನ್ನು ಗೋಪಾಲನು ತನ್ನ ಅಮ್ಮನಿಗೆ ಹೇಳಿದನು. ಬನದಲ್ಲಿ ಹೂಗಳ ಚಂದವನ್ನು ಹೇಳುವಾಗ ಈ ಮಾತು ಬಂದಿದೆ.

೨ ಅಮ್ಮನ ಮಾತು ಸುಳ್ಳಾಗಲಾರದು

ಈ ಮಾತನ್ನು ಕುವೆಂಪುರವರು ಬರೆದಿರುವ ನನ್ನ ಗೋಪಾಲ ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಗೋಪಾಲನು ಹೇಳುತ್ತಾನೆ. ಕಾಡಿನಲ್ಲಿ ಬರುವಾಗ ಅವನಿಗೆ ಭಯವಾದಾಗ ಮೇಲಿನ ಮಾತನ್ನು ಹೇಳುತ್ತಾರೆ.

೩ ಆ ಗೋಪಾಲ ಕೊಡಬೇಕು ನಾವು ಉಣಬೇಕು.

ಈ ಮಾತನ್ನು ಕುವೆಂಪುರವರು ಬರೆದಿರುವ ನನ್ನ ಗೋಪಾಲ ಎಂಬ ಪಾಠದಿಂದ ಆರಿಸಲಾಗಿದೆ. ಈ ವಾಕ್ಯವನ್ನು ತಾಯಿಯು ಹೇಳುತ್ತಾಳೆ.ಗೋಪಾಲ ಹೊಸ ಪಂಚೆ ಕೇಳಿದಾಗ ಈ ಮೇಲಿನ ಮಾತು ಬಂದಿದೆ.

**ಎಳೆಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

೧ ಗೋಪಾಲ ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವೇನು?

ಉ: ಗೋಪಾಲನು ಬನದ ವರ್ಣನೆ ಮಾಡಿದಾಗ ತಾಯಿ ಖುಷಿ ಪಡುತ್ತಾಳೆ. ತನಗೆ ಪಂಚೆ ಬೇಕು ಎಂದು ಕೇಳಿದಾಗ ಸಮಾಧಾನ ಪಡಿಸುತ್ತಾಳೆ. ಕಾಡಿನಲ್ಲಿ ಭಯವಾಗುತ್ತದೆ ಎಂದಾಗ ಬನದ ಗೋಪಾಲ ರಕ್ಷಿಸುತ್ತಾನೆ ಎಂದು ಹೇಳಿ ಧೈರ್ಯ ಹೇಳುತ್ತಾಳೆ.

# ಏಣಿ

<u>ಕವಿ ಕೃತಿ ಪರಿಚಯ:</u>

ಹೆಸರು: ಸುಕನ್ಯ ಮಾರುತಿ

ಜನನ: 1956

ಸ್ಥಳ : ಬಳ್ಳಾರಿ ಜಿಲ್ಲೆಯ ಕೊಟ್ಟೂರು

ಕೃತಿಗಳು: ನಾನು ನನ್ನವರು, ನಾವೆಂಬ ಮಾಯೆ

ಪ್ರಶಸ್ತಿಗಳು: ಪಂಪ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಏಣಿ ಜನರಿಗೆ ಮಾಡಿದ ಉಪಕಾರವೇನು?

ಉ: ಏಣಿ ಮೇಲೆ ಏರಲು ಸಹಾಯ ಮಾಡುತ್ತದೆ.

೨ ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?

ಉ: ನಾನಿಲ್ಲದೆ ಜನ ಹೇಗೆ ಇಳಿಯುತ್ತಾರೆ ಎಂದು ಏಣಿ ಸವಾಲು ಹಾಕುತ್ತದೆ.

೩ ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?

ಉ: ಮೇಲೆ ಏರಿ ಕೆಳಗೆ ಇಳಿಯಲು ಆಗದವರನ್ನು ತ್ರಿಶಂಕುಗಳು ಎಂದು ಕರೆದಿದ್ದಾರೆ.

೪ ಏಣಿಗೆ ಬೀಳುವ ಭಯವಿಲ್ಲ ಏಕೆ?

ಉ: ಗಟ್ಟಿ ನೆಲದಲ್ಲಿ ನಿಂತ ಕಾರಣ ಏಣಿಗೆ ಬೀಳುವ ಭಯವಿಲ್ಲ.

**ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ.**

೧ ಏಣಿ ಹೇಳಿಕೊಳ್ಳುವ ಕಷ್ಟಗಳೇನು?

ಉ: ಜನ ಸಾಮಾನ್ಯರು ಅದರ ಮೇಲೆ ಭಾರ ಹಾಕಿ ಮೇಲೆ ಏರಿದಾಗ ಆ ಭಾರವನ್ನು ಹೊತ್ತು ನೋವನ್ನು ಅನುಭವಿಸುತ್ತದೆ. ಆದರೆ ಸಹಾಯ ಮಾಡಿದ ನನ್ನ ಮೇಲೆ ಕಾಳಜಿಯೇ ಇಲ್ಲ ಎಂದು ಕಷ್ಟಗಳನ್ನು ಹೇಳಿಕೊಳ್ಳುತ್ತದೆ.

೨ ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?

ಉ: ಮೇಲಂತಸ್ತು ಯಾವಾಗಲೂ ಶಾಶ್ವತ ಅಲ್ಲ, ಮೇಲೇರಿದವರು ಕೆಳಗೆ ಇಳಿಯಲೇಬೇಕು. ಸಹಾಯ ಮಾಡಿದವರನ್ನು ಮರೆಯ ಬಾರದು.

**ಸಂದರ್ಭದೊಡನೆ ವಿವರಿಸಿ**

೧ ನಮ್ರತೆಗೆ ನಾ ಕರಗುತ್ತೇನೆ.

ಈ ಮಾತನ್ನು ಸುಕನ್ಯಾ ಮಾರುತಿಯವರು ಬರೆದ ಏಣಿ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಏಣಿ ಹೇಳುತ್ತದೆ. ಬೆಳೆಯಬಲ್ಲವರನ್ನು ಮಾತ್ರ ಎತ್ತಿ ಹಿಡಿಯುತ್ತೇನೆಎಂದು ಹೇಳುವಾಗ ಈ ಮಾತು ಬಂದಿದೆ.

೨ ನಾನು ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು.

ಈ ಮಾತನ್ನು ಸುಕನ್ಯಾ ಮಾರುತಿಯವರು ಬರೆದ ಏಣಿ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಏಣಿ ಹೇಳುತ್ತದೆ ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಸವಾಲು ಹಾಕುವಾಗ ಏಣಿ ಈ ಮಾತನ್ನು ಹೇಳುತ್ತದೆ.

**ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ**

೧ ಏಣಿ ಕವಿತೆ ನೀಡುವ ಸಂದೇಶವೇನು?

ಉ: ಏಣಿ ಎಷ್ಟೋಂದು ಜನರನ್ನು ಎತ್ತಿ ಹಿಡಿಯುತ್ತದೆ. ಅದರ ಮೇಲೆ ಹತ್ತಿ ಹೋದ ಕೆಲವರು ಮರೆತು ಬಿಡುತ್ತಾರೆ. ಮೇಲಂತಸ್ತು ಶಾಶ್ವತವಲ್ಲ. ಸಹಾಯ ಮಾಡಿದವರ ನೆನಪು ಇರಬೇಕು.ನಮ್ರತೆಗೆ ನಾನು ಕರಗುತ್ತೇನೆ ಎಂದು ಏಣಿ ಹೇಳುತ್ತದೆ.

**********

# ಬೋಧಿವೃಕ್ಷದ ಹಾಡು

**ಕವಿ ಪರಿಚಯ:**

ಬಸವರಾಜ ಸಬರದ ಅವರು 1954ರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಜನಿಸಿದರು. ನನ್ನವರ ಹಾಡು ಮತ್ತು ನೂರು ಹನಿಗಳು ಇವರ ಕೃತಿಗಳು. ಇವರಿಗೆ ಕಾವ್ಯಾನಂದ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿವೆ.

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ಸಿದ್ದಾರ್ಥ ಬುದ್ದನಾದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?

ಉ: ಯುದ್ದ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.

೨ ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?

ಉ:ಸಿದ್ಧಾರ್ಥ ಪತ್ನಿ , ಮಗ, ಅರಮನೆಯ ಮೋಹವನ್ನು ತೊರೆದನು.

೩ ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?

ಉ:ನಾಡಿನರ್ಥ ಹೊಳೆಯಿತು.

೪ ಸಿದಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?

ಉ: ಜನರ ಪ್ರೀತಿಯನ್ನು ಹುಡುಕುತ್ತ ನಾಡಿನತ್ತ ಹೊರಟನು.

೫ ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು?

ಉ:ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದು ಎಂಬ ಬದುಕಿನ ಗೂಡಾರ್ಥವನ್ನು ಕಂಡುಕೊಂಡನು.

೬ ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?

ಉ:ಬುದ್ಧನ ಜೀವನವನ್ನು ತಿಳಿಸುತ್ತದೆ.

೭ ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?

ಉ:ತಪಸ್ಸಿಗಿಂತ ಜೀವಪ್ರೀತಿ ದೊಡ್ಡದೆಂಬ ಬದುಕಿನ ಸತ್ಯವನ್ನು ಅರಿತು ಕೊಂಡನು.

**ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ**

೧ ಸಿದ್ದಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?

ಉ:ಕಾಡು ಕಾಡುಗಳಲ್ಲಿ ಅಲೆದ ಅವನಿಗೆ ನಾಡಿನ ಅರ್ಥ ಹೊಳೆಯುತ್ತದೆ. ಕೋಗಿಲೆಯ ಹಾಡು ದೂರದಿಂದ ಕೇಳಿ ಬರುತ್ತದೆ,ಬೆಳ್ಳಿ ಚುಕ್ಕಿ ಬಾನಿನಲ್ಲಿ ಬೆಳಗುತ್ತದೆ .ಆಗ ಬೋಧಿವೃಕ್ಷದಲ್ಲಿ ಮಹಾ ಬೆಳಕು ಕಂಡು ಬುದ್ಧನಿಗೆ ಜ್ಞಾನೋದಯವಾಯಿತು ಎಂದು ಕವಿ ಬಣ್ಣಿಸಿದ್ದಾರೆ.

೨ ಸಿದ್ದಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿ ಕೊಂಡಿತು?

ಉ:ಕಾಡಿನ ತುಂಬ ಪ್ರೀತಿಯೆಂಬ ಹೊಳೆಯು ಹರಿಯಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ದುಂಬಿ ಹೂವಿನಿಂದ ಹೂವಿಗೆ ಹಾರಾಡುತಿತ್ತು. ಎಲ್ಲ ಗಿಡಗಳು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

**ಸಂದರ್ಭದೊಡನೆ ವಿವರಿಸಿ**

೧ ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು.

ಈ ವಾಕ್ಯವನ್ನು ಬಸವರಾಜ ಸಬರದ ಅವರು ಬರೆದಿರುವ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ.

೨ ಕಾಡ ತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು.

ಈ ವಾಕ್ಯವನ್ನು ಬಸವರಾಜ ಸಬರದ ಅವರು ಬರೆದಿರುವ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಸಿದ್ದಾರ್ಥನು 'ಬೋಧಿವೃಕ್ಷದ ಕೆಳಗೆ ತಪಸ್ಸು ಮಾಡುವಾಗ ಪ್ರಕೃತಿಯ ಸೌಂದರ್ಯವನ್ನು ಕಾಣುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳಿದ್ದಾರೆ.

೩ ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.

ಈ ವಾಕ್ಯವನ್ನು ಬಸವರಾಜ ಸಬರದ ಅವರು ಬರೆದಿರುವ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಲಾಗಿದೆ.

**********

# ಸವಿಚೈತ್ರ

**ಕೃತಿಕಾರರ ಪರಿಚಯ:**

ಬಸವರಾಜ ಸಾದರ: ಇವರು 1955ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿ ಜನಿಸಿದರು. ಇವರು ಸಿಸಿಫಸರ ಸುತ್ತು, ಹೊಸ ಅಲೋಚನೆ, 'ತಪ್ಪಂಡ 'ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?

ಉ: ಯುಗಾದಿ ಬಂದಾಗ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

೨ ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?

ಉ: ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೊಸ ಮದು ಮಗಳಂತೆ ಸಿಂಗಾರಗೊಳ್ಳುತ್ತಾಳೆ.

೩ ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?

ಉ: ನೆಲಮುಗಿಲ ವಾಲಗ ನಡೆದಿರುತ್ತದೆ.

೪ ಸವಿಚೈತ್ರದ ಸೊಬಗು ಏನು?

ಉ: ಚೈತ್ರದಲ್ಲಿ ಪ್ರಕೃತಿ ಹಸಿರಿನಿಂದ ಕಂಗೊಳಿಸುತ್ತದೆ.

೫ ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?

ಉ: ಬೇವು ಬೆಲ್ಲ ಹಂಚುವ ಸಂಪ್ರದಾಯವಿದೆ.

**ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:**

೧ ಯುಗದ ಆದಿ ತಂದ ಸಂಭ್ರಮವೇನು?

ಉ: ಯುಗದ ಆದಿ ಬಂದರೆ ಪ್ರಕೃತಿಯು ಮದುಮಗಳಂತೆ ಕಾಣುತ್ತದೆ ಜಗತ್ತೆಲ್ಲ ಹೊಸ ಕಳೆಯಿಂದ ಕಂಗೊಳಿಸುತ್ತದೆ.

೨ ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ?

ಉ: ಚೈತ್ರ ಮಾಸದಲ್ಲಿ ಪ್ರಕೃತಿಯು ಹೊಸ ಚಟುವಟಿಕೆಗಳಿಂದ ಕಂಗೊಳಿಸುತ್ತದೆ. ಗಿಡ ಮರಗಳು ಚಿಗುರಿ ಹೊಸ ಉಲ್ಲಾಸ ನೆಲ ಮುಗಿಲ ವಾಲಗ ನಡೆದಂತೆ ಕಾಣುತ್ತದೆ.

**ಸಂದರ್ಭದೊಡನೆ ವಿವರಿಸಿ**

೧ 'ನೆಲದಮ್ಮ ನವ ವಧುವೆ ಆದಳಿಂತು'

ಈ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಲಾಗಿದೆ. ಈ ವಾಕ್ಯವನ್ನು ಕವಿ ಚೈತ್ರ ಮಾಸದಲ್ಲಿ ಅಗುವ ಬದಲಾವಣೆಯನ್ನು ಕುರಿತು ಹೇಳಿದ್ದಾರೆ.

೨ 'ಎಲ್ಲರೆದೆಗಳ ತುಂಬಾ ಸವಿಚೈತ್ರವು'

ಈ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಲಾಗಿದೆ. ಯುಗಾದಿಯು ಹಿಂದಿನ ಕಹಿ ನೆನಪುಗಳನ್ನು ತೊಳೆದು ಬೆಲ್ಲದ ಸವಿಯನ್ನು ಸವಿದಂತೆ ಎಲ್ಲರ ಮನಸ್ಸಿನಲ್ಲಿ ಸಿಹಿ ಭಾವನೆಯನ್ನು ಮೂಡಿಸುತ್ತದೆ ಎಂದು ಕವಿ ಹೇಳಿದ್ದಾರೆ.

**********

# ಸದ್ದು ಮಾಡದಿರು

ಕೃತಿಕಾರರ ಪರಿಚಯ:

ಸಿ.ಪಿಕೃಷ್ಣಕುಮಾರ್ : ಇವರು ಚಿಕ್ಕನಾಯಕನ ಹಳ್ಳಿಯಲ್ಲಿ 1939ರಲ್ಲಿ ಜನಿಸಿದರು 'ತಾರಾಸುಖ''ಬೊಗಸೆ' ಇವರ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿರಿ**

೧ ತಿಮಿರಕ್ಕೆ ವೈರಿ ಯಾವುದು?

ಉ: ತಿಮಿರಕ್ಕೆ ವೈರಿ ದೀಪ.

೨ ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ?

ಉ: ರವಿಯ ಕಿರಣಕ್ಕೆ ಇಬ್ಬನಿ ಕರಗುವಂತೆ ಮಾನವನು ತನ್ನ ಬದುಕನ್ನು ಶಾಂತಿಯಿಂದ ಮುಗಿಸಬೇಕೆಂದು ಇಬ್ಬನಿಗೆ ಹೋಲಿಸಿದ್ದಾರೆ.

೩ ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?

ಉ: ನಮ್ಮ ಕರ್ತವ್ಯಗಳನ್ನು ಶಾಂತರೀತಿಯಿಂದ ಮುಗಿಸಬೇಕೆಂದು ಕವಿ ಹೇಳಿದ್ದಾರೆ.

**ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

೧ ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡಿರುವ ಹೋಲಿಕೆಗಳಾವುವು?

ಉ: ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಕರಗುವಂತೆ, ದೀಪದ ಎದುರು ಕತ್ತಲು ಸರಿಯುವಂತೆ, ರವಿಕಿರಣಕ್ಕೆ ಇಬ್ಬನಿಯು ಕರಗುವ ಹೋಲಿಕೆಗಳನ್ನು ನೀಡಿದ್ದಾರೆ.

೨ ಕೂಗಾಟದ ಬದುಕು ನಿಷ್ಪ್ರಯೋಜಕ ಎಂಬುದಕ್ಕೆ ಕವಿ ನೀಡಿರುವ ನಿದರ್ಶನಗಳು ಯಾವುವು?

ಉ: ಹಸಿ ಸೌದೆ ಉರಿಯುವಾಗ ಜೋರಾಗಿ ಸದ್ದು ಮಾಡುವ, ಸಿಡಿಮದ್ದು ಜೋರಾಗಿ ಸಿಡಿಯುವ ನಿದರ್ಶನಗಳನ್ನು ನೀಡಿದ್ದಾರೆ.

೩ ಕರ್ಪೂರದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?

ಅಥವಾ

ಮಾನವನ ಬದುಕು ಕರ್ಪೂರದಂತಿರಬೇಕು ಹೇಗೆ?

ಉ: ಕರ್ಪೂರವು ತಟ್ಟೆಯೊಳಗೆ ಮೌನವಾಗಿ ಕರಗುತ್ತದೆ. ಸದ್ದುಗದ್ದಲವಿಲ್ಲದೆ ಬೆಳೆದು ತನ್ನ ಕೆಲಸವನ್ನು ಮುಗಿಸುತ್ತದೆ.

**ಸಂದರ್ಭದೊಡನೆ ವಿವರಿಸಿ**

೧ 'ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು'

ಈ ವಾಕ್ಯವನ್ನು ಸಿ.ಪಿ.ಕೆಯವರ ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಮಾನವ ಶಾಂತಿಯಿಂದ ಕೆಲಸವನ್ನು ಮುಗಿಸಬೇಕು ಎಂದು ಹೇಳುವಾಗ ಈ ಮಾತು ಬಂದಿದೆ.

೨ಸಿಡುಕು ಮಿಡುಕನು ತೊರೆದು ಮೌನಿಯಾಗು'

ಈ ವಾಕ್ಯವನ್ನು ಸಿ.ಪಿ.ಕೆಯವರ ಸದ್ದು ಮಾಡದಿರು ಎಂಬ ಪದ್ಯದಿಂದ ಆರಿಸಲಾಗಿದೆ.

ಹಸಿ ಸೌದೆ ಉರಿಯುವಾಗ ಜೋರಾಗಿ ಸದ್ದು ಮಾಡುವಂತೆ, ಸಿಡಿಮದ್ದು ಜೋರಾಗಿ ಸಿಡಿಯುವಂತೆ ನಾವು ಇರದೆ ಶಾಂತಿಯಲ್ಲಿ ಜೀವನವನ್ನು ಮುಗಿಸಬೇಕು ಎಂದು ಕವಿ ಹೇಳಿದ್ದಾರೆ.

**********

# ಗುರಿ

## ಕವಿ ಕೃತಿ ಪರಿಚಯ:

ಎಂ. ಗೋಪಾಲಕೃಷ್ಣ ಅಡಿಗರು: ಜನನ 1918 ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಮೊಗೇರಿ.

ಕೃತಿಗಳು: ಭಾವತರಂಗ, ಚಂಡೆ ಮದ್ದಳೆ, ಭೂಮಿ ಗೀತ.

ಪ್ರಶಸ್ತಿಗಳು: ಪಂಪಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ.

**ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧ ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ?

ಅಥವಾ

ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ?

ಉ: ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಿದರೆ ನೆಲೆಯಿರದೆ ಅಲೆದಾಡಬೇಕಾಗುತ್ತದೆ.

೨ ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?

ಉ: ಜೀವನದಲ್ಲಿ ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ದುಡಿದಾಗ ನಮ್ಮ ದುಡಿಮೆಯ ಹೂವು ಫಲಿಸುವುದು.

೩ ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?

ಉ: ಒಳ್ಳೆಯ ದಾರಿಯಲ್ಲಿ ಕೊನೆಯವರೆಗೂ ಜೀವಿಸುವುದು ಪೌರುಷದ ಬಾಳ್ವೆ.

೪ ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳಿದ್ದಾರೆ?

ಉ: ಒಂದೇ ಹೆಗ್ಗುರಿಗೆ ಹಗಲಿರುಳು ದುಡಿಯಬೇಕೆಂದು ಅಡಿಗರು ಹೇಳಿದ್ದಾರೆ.

**ಕೆಳಗಿನ ಪಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ**

೧ ನಮ್ಮ ಬದುಕು ಕೆಸರಿನ ಕಮಲದಂತೆ ಇರಬೇಕು ಏಕೆ?

ಉ: ಕಮಲವು ಕೆಸರಿನಲ್ಲಿದ್ದರೂ ಮೇಲಿರುವ ಸೂರ್ಯನ ಕಿರಣಗಳಿಗೆ ಮೆರೆಯುತ್ತದೆ. ಹಾಗೆಯೇ ಮನುಷ್ಯನು ಕೂಡಾ ತನ್ನ ಗುರಿ ಸಾಧನೆಯಲ್ಲಿ ತೊಡಗಬೇಕು.

೨ ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ?

ಉ: ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ, ಒಂದು ಜೀವನಕ್ಕೆ ಒಂದೇ ಗುರಿ ಇರಬೇಕು.

**ಸಂದರ್ಭದೊಡನೆ ವಿವರಿಸಿ**

೧ ದಾಳಿ ಬಂದೊಡನೆ ಶರಣೆಂಬ ಹೆಣ್ತನವು.

ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗರು ಬರೆದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ.

ಗಾಳಿ ಬಂದ ಕಡೆ ತಿರುಗುವುದು ಹೇಡಿತನ, ದಾಳಿ ಬಂದಾಗ ಶರಣಾಗುವುದು ಹೆಣ್ತನ. ಹಿಡಿದ ದಾರಿಯಲ್ಲಿ ಕೊನೆಯವರೆಗೂ ನಡೆಯಬೇಕು.

೨ "ಒಂದು ಜೀವನಕೇಕೆ ಹಲವು ಸಾಧ್ಯಗಳು"?

ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಗಳು ಹೇಳುತ್ತಾರೆ.

ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ, ಒಂದು ಜೀವನಕ್ಕೆ ಒಂದೇ ಗುರಿ ಇರಬೇಕು ಎಂದು ಹೇಳುವಾಗ ಕವಿ ಈ ಮಾತನ್ನು ಹೇಳಿದ್ದಾರೆ.

**ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ:**

ಬದುಕಿಗೊಂದು ಗುರಿಯಿರಬೇಕು, ತಾವರೆಯು ಕೆಸರಲ್ಲಿದ್ದರೂ ರವಿಯ ಕಿರಣಕ್ಕೆ ಹೊಳೆಯುವಂತೆ ಮಾನವನ ಬದುಕು ಸಾರ್ಥಕವಾಗಲು ಗುರಿಬೇಕು. ಗಾಳಿ ಬಂದಾಗ ತೂರಿಕೊಳ್ಳದೆ, ದಾಳಿ ಬಂದಾಗ ಶರಣಾಗುವುದನ್ನು ಬಿಟ್ಟು ಹಿಡಿದ ದಾರಿಯಲ್ಲಿ ಕೊನೆಯವರೆಗೆ ಬಾಳಬೇಕು. ಜೀವನಕ್ಕೆ ಒಂದೇ ಗುರಿಯಿರಬೇಕು. ಬೇರೆಯವರಿಗೆ ಸಹಾಯ ಮಾಡಬೇಕು.

**********

# ಮೂಡಲ್ ಕುಣಿಗಲ್ ಕೆರೆ

**ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧ ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

ಉ: ಕುಣಿಗಲ್ ಕೆರೆಯನ್ನು  ನಿಂಬೆಯ ಹಣ್ಣಿಗೆ ಹೋಲಿಸಲಾಗಿದೆ.

೨ ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಹೇಳಲಾಗಿದೆ?

ಉ: ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವ ಬಂದನೆಂದು ಹೇಳಲಾಗಿದೆ.

೩ ಶಿವನು ಕುಣಿಗಲ್ ಕೆರೆಯನ್ನು ನೋಡಲಿಕ್ಕೆ ಏಕೆ ಬಂದನು?

ಉ: ಕೆರೆಯು ತುಂಬಿದ್ದರಿಂದ ಅದರ ಅಂದ ನೋಡಲು ಶಿವನು ಬಂದನು.

೪ ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?

ಉ: ಕುಣಿಗಲ್ ಕೆರೆಯು ಪೂರ್ವ ದಿಕ್ಕಿನಲ್ಲಿದೆ.

೫ ಕುಣಿಗಲ್ ಕೆರೆ ಹೇಗೆ ಬಾಗಿದೆ?

ಉ: ಕುಣಿಗಲ್ ಕೆರೆ ಬಾಳೆ ಹಣ್ಣಿನಂತೆ ಬಾಗಿದೆ.

೬ ಕೆರೆಯಲ್ಲಿ ಯಾವ ಮೀನುಗಳಿದ್ದವು?

ಉ: ಬಾಳೆ ಮೀನುಗಳು ಕೆರೆಯಲ್ಲಿ ಇದ್ದವು.

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧ ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತಿತ್ತು?

ಉ: ಮೂಡಲ್ ಕುಣಿಗಲ್ ಕೆರೆ ಪೂರ್ವದಿಕ್ಕಿನಲ್ಲಿದೆ.  ಚಂದಿರನು ಮೂಡಿ ಬರುತ್ತಾನೆ. ಸಂತೆಯ ದಾರಿಯಲ್ಲಿದ್ದು, ಕಲ್ಲು ಕಟ್ಟೆಯಿಂದ ಕೂಡಿದೆ. ಬಾಳೆ ಹಣ್ಣಿನಂತೆ ಬಾಗಿದೆ. ನಿಂಬೆ ಹಣ್ಣಿನಂತೆ ತುಂಬಿದೆ.

೨ ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ?

ಉ: ಕುಣಿಗಲ್ ಕೆರೆ ಅನೇಕ ಜಲಚರಗಳಿಗೆ ಆಶ್ರಯ ನೀಡಿದೆ. ಈ ಜಲಚರಗಳನ್ನು ಹಿಡಿದು ತಿನ್ನಲು ಕಬ್ಬಕ್ಕಿಗಳು ಬಾಯಿ ಬಿಡುತ್ತವೆ.

೩ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

ಉ: ಮೀನುಗಾರರು ಬಾಳೆ ಮೀನುಗಳನ್ನು ಹಿಡಿಯಲು ಬಲೆ ಬೀಸುತ್ತಾರೆ. ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ಮೇಲಕ್ಕೆ ಎತ್ತಿದಾಗ ಅದು ಬೊಬ್ಬೆ ಹೊಡೆಯುತ್ತದೆ.

**ಸಂದರ್ಭದೊಡನೆ ವಿವರಿಸಿ.**

೧ ಭಾವ ತಂದಾನೆಬಣ್ಣದ ಸೀರೆ

ಈ ವಾಕ್ಯವನ್ನು ಮೂಡಲ್ ಕುಣಿಗಲ್ ಕೆರೆ ಪದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಜನಪದರು ಕೆರೆಗಳು ತುಂಬಿದಾಗ ಬಾಗಿನ ನೀಡಲು ಭಾವನು ಬಣ್ಣದ ಸೀರೆಯನ್ನು ತಂದಾಗ ಈ ಮಾತು ಬಂದಿದೆ.

೨ ಬೊಬ್ಬೆ ಹೊಡೆದಾವೆ ಬಾಳೆ ಮೀನು

ಈ ಮಾತನ್ನು ಮೂಡಲ್ ಕುಣಿಗಲ್ ಕೆರೆ ಪದ್ಯಭಾಗದಿಂದ ಆರಿಸಲಾಗಿದೆ.

ಮೀನುಗಾರರು ಬಾಳೆ ಮೀನುಗಳನ್ನು ಹಿಡಿಯಲು ಬಲೆ ಬೀಸುತ್ತಾರೆ. ಬಲೆಯಲ್ಲಿ ಸಿಲುಕಿಕೊಂಡ ಮೀನುಗಳನ್ನು ಮೇಲಕ್ಕೆ ಎತ್ತಿದಾಗ ಈ ಮಾತು ಬಂದಿದೆ.

**********

# <u>ವಚನಗಳು</u>

## <u>ಕೃತಿಕಾರರ ಪರಿಚಯ:</u>

ಬಸವಣ್ಣ :

ಕಾಲ: 12ನೇ ಶತಮಾನ

ಊರು: ವಿಜಯಪುರ ಜಿಲ್ಲೆಯ ಬಾಗೇವಾಡಿ

ತಂದೆ: ಮಾದರಸ

ತಾಯಿ: ಮಾದಲಂಬಿಕೆ

ಅಂಕಿತ: ಕೂಡಲ ಸಂಗಮ ದೇವ

ಅಕ್ಕಮಹಾದೇವಿ:

ಕಾಲ: 12ನೇ ಶತಮಾನ

ಊರು : ಶಿವಮೊಗ್ಗ ಜಿಲ್ಲೆಯ ಉಡುತಡಿ

ಅಂಕಿತ : ಚೆನ್ನಮಲ್ಲಿಕಾರ್ಜುನ

**ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧ ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ.

ಉ: ನೀರನ್ನು ಕಂಡಲ್ಲಿ ಮುಳುಗುವ ಮತ್ತು ಮರವನ್ನು ಕಂಡಲ್ಲಿ ಸುತ್ತುವರೆಯುವ ನಂಬಿಕೆಯನ್ನು ಖಂಡಿಸಿದ್ದಾರೆ.

೨ ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ದರಾಮ ಹೇಳುತ್ತಾರೆ?

ಉ: ವೇಷ ಧರಿಸಿದ ಮೇಲೆ ವೇಷಕ್ಕೆ ತಕ್ಕ ಆಚರಣೆಯನ್ನು ಹೊಂದಿರಬೇಕು.

೩ ವೇದಾಂತವನ್ನು ಓದಿದವನು ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ?

ಉ: ವೇದಾಂತವನ್ನು ಓದಿದವನು ಜ್ಞಾನಿಯಾಗಿರಬೇಕು.

೪ ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?

ಉ: ನಾನಾ ಕೆರೆಗಳನ್ನು ತೋಡಿ ಪುಣ್ಯ ತೀರ್ಥಗಳು ಬರದೇ ಇದ್ದಾಗ.

೫ ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

ಉ: ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.

**ಎರಡು ಮೂರು ವಾಕ್ಯದಲ್ಲಿ ಉತ್ತರಿಸಿರಿ.**

೧ ಬಸವಣ್ಣನವರು  ಜನರ ಧಾರ್ಮಿಕ ನಂಬಿಕೆಗಳನ್ನು ಯಾಕೆ ಖಂಡಿಸಿದ್ದಾರೆ?

ಉ: ನೀರನ್ನು ಕಂಡಲ್ಲಿ ಮುಳುಗುತ್ತಾರೆ, ಮರವನ್ನು ಕಂಡಾಗ ಸುತ್ತುತ್ತಾರೆ.ಹೀಗೆ ಬತ್ತುವ ಜಲ ಹಾಗೂ ಒಣಗಿದ ಮರವನ್ನು ಮೆಚ್ಚಿದವರು ಕೂಡಲ ಸಂಗಮ ದೇವನನ್ನು ಅರಿಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

**ಸಂದರ್ಭದೊಡನೆ ವಿವರಿಸಿ**

೧ ವೇದಾಂತವನೋದಿ ಫಲವೇನಯ್ಯಾ

ಈ ಮಾತನ್ನು  ಸಿದ್ದರಾಮರು ಬರೆದಿರುವ ವಚನಗಳು ಪದ್ಯದಿಂದ ಆರಿಸಲಾಗಿದೆ.

ತಾನು ವೇದವನ್ನು ಅರ್ಥ ಮಾಡಿಕೊಂಡು ಬ್ರಹ್ಮನಾಗದ ಮೇಲೆ ವೇದಾಂತವನ್ನು ಓದಿ ಫಲವಿಲ್ಲ ಎಂದಾಗ ಈ ಮಾತು ಬಂದಿದೆ.

**********

# ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

**ಕವಿ ಪರಿಚಯ:**

ಕುಮಾರವ್ಯಾಸ:

ಸ್ಥಳ: ಗದುಗಿನ ಕೋಳಿವಾಡ

ಕಾಲ:1430

ಕೃತಿ: ಗದುಗಿನ ಭಾರತ, ಐರಾವತ

ಪ್ರಶಸ್ತಿ: ರೂಪಕ ಸಾಮ್ರಾಜ್ಯ ಚಕ್ರವರ್ತಿ

**ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧ ಕೌರವನಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

ಉ: ಕೌರವನಸೇನೆಯು ಉತ್ತರನಿಗೆವಿಶಾಲವಾದ ಸಮುದ್ರದಂತೆ ಕಂಡಿತು.

೨ ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಯಾಕೆ?

ಉ: ಉತ್ತರನು ಕೌರವರ ಸೈನ್ಯವನ್ನು ಕಂಡು ನಿಟ್ಟೋಟದಲ್ಲಿ ಓಡಿದನು.

೩ ಧುರಕ್ಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?

ಉ: ಧುರಕ್ಕೆ ಬೆನ್ನು ಹಾಕಿದರೆ ಪಾಪ ಪ್ರಾಪ್ತಿಯಾಗುತ್ತದೆ.

೪ ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?

ಉ: ಅರ್ಜುನನು ಉತ್ತರಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.

೫ ಉತ್ತರನಿಗೆ ಇಂದ್ರ ಪದವಿಯು ಯಾಕೆ ಬೇಕಿಲ್ಲ?

ಉ: ಉತ್ತರನಿಗೆ ಯುದ್ದದಲ್ಲಿ ಕೌರವ ಸೈನ್ಯದಿಂದ ಸಾಯುವುದು ಬೇಕಾಗಿಲ್ಲ. ಆದ್ದರಿಂದ ಅವನಿಗೆ ಇಂದ್ರ ಪದವಿ ಬೇಕಾಗಿಲ್ಲ.

೬ ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?

ಉ: ಅರಮನೆಯ ನಾರಿಯರು ತುಂಬುತ್ತಾರೆ.

**ಸಂದರ್ಭದೊಡನೆ ವಿವರಿಸಿ**

೧ ಎಮ್ಮರ ಮನೆಯ ನಾರಿಯರೇ ಸಾಕು.

ಈ ವಾಕ್ಯವನ್ನು ಕುಮಾರವ್ಯಾಸನು ಬರೆದಿರುವ ''ನಿಟ್ಟೋಟದಲಿ ಆಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳಿದನು.ಕೌರವರ ಸೇನೆಗೆ ಹೆದರಿ ಉತ್ತರನು ರಣರಂಗದಿಂದ ಓಡಿ ಹೋಗುವಾಗ ಈ ಮೇಲಿನ ಮಾತನ್ನು ಹೇಳುತ್ತಾನೆ.

**ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ**

೧ ಶತ್ರು ಬಲಕೆ ನಮೋ ಎಂದು ಉತ್ತರನು ಏಕೆ ಹೇಳಿದನು?

ಉ: ಕೌರವರ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಂಡಿತು.ಇಡೀ ಭೂಮಿ ಸೈನ್ಯದಿಂದ ತುಂಬಿತ್ತು.ಇವರೊಡನೆ ಯುದ್ಧ ಮಾಡಲು ಶಿವನಿಂದ ಮಾತ್ರ ಸಾಧ್ಯ ಎಂದು ಶತ್ರು ಬಲಕ್ಕೆ ನಮೋ ಎಂದನು.

೨ ಒಡಲು ಒಡೆಯುವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?

ಉ: ಅರ್ಜುನನು ನಗುತ್ತ ರಥವನ್ನು ಮುಂದೆ ನೂಕಲು, ಕೊಂದನೂ ಈ ಸಾರಥಿ ಎನ್ನುತ್ತಾ ರಥದಿಂದ ಕೆಳಕ್ಕೆ ಉತ್ತರನು ಹಾರಿದನು. ಇದನ್ನು ನೋಡಿ ಒಡಲು ಒಡೆಯುವಂತೆ ಅರ್ಜುನನು ಮನದಲ್ಲಿ ನಕ್ಕನು.

೩ ಕಾದು ನಡೆಯೆಂದು ಅರ್ಜುನನು ಉತ್ತರನನ್ನು ಯಾಕೆ ಒತ್ತಾಯಿಸಿದನು?

ಉ: ಉತ್ತರನು ಅರಮನೆಯ ನಾರಿಯರ ಮುಂದೆ ಕೌರವರ ಸೇನೆಯನ್ನು ಸುಲಭವಾಗಿ ಸೋಲಿಸುತ್ತೇನೆಂದು ಬಾಯಿಗೆ ಬಂದಂತೆ ಮಾತನಾಡಿದನು.ಆದರೆ ಯುದ್ದದಲ್ಲಿ ಕೌರವರ ಸೇನೆಯನ್ನು ನೋಡಿ ಹೆದರಿ ಓಡಿದನು. ಅಗ ಅರ್ಜುನನು ಅಂದು ನೀನು ಹಲ್ಲು ಕಿರಿದು ಮಾತನಾಡಿದೆ. ಈಗ ಹೆದರಿ ನರಿಯಂತೆ ಓಡುವುದು ಸರಿಯಲ್ಲ, ಕಾದು ನಡೆ ಎಂದು ಅರ್ಜುನನು ಉತ್ತರನಿಗೆ ಹೇಳಿದನು.

**********

# ಕಳ್ಳರ ಗುರು

೧ ಹಾವನ್ನು ಕಂಡ  ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?

ಉ: ಹಾವಿಗೆ ತೊಂದರೆ ಕೊಡದಿದ್ದರೆ ಅದು ಯಾರಿಗೂ ಏನೂ ಮಾಡುವುದಿಲ್ಲ, ಆದರೆ ಮನುಷ್ಯ ಸುಮ್ಮನಿರುವುದಿಲ್ಲ, ಮಾನವನ ಆಸೆ ಎಲ್ಲರನ್ನು ಕಡಿಯುತ್ತದೆ.

೨  ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

ಉ: ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ನೋಡಿದರು.ರಾತ್ರಿ ಹೊತ್ತಿನಲ್ಲಿ ಕಾಡಿಗೆ ಹೋಗಿ ಯಾವುದೋ ಸೊಪ್ಪನ್ನು ತಂದು ಜಜ್ಜಿ ಅದರ ರಸವನ್ನು ಹಿಂಡಿ ಆ ರಸದಲ್ಲಿ ಮದ್ದನ್ನು ಕುಡಿಸುವುದರ ಮೂಲಕ ಮಗುವಿನ ಪ್ರಾಣವನ್ನು ಉಳಿಸಿದರು.

೩ ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?

ಉ:“ಕಾಯುವುದು ದೇವರ ಕೆಲಸ. ಕೊಲ್ಲುವುದು ರಾಕ್ಷಸರ ಕೆಲಸ”ಈ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

೪ ಭೀಮನಾಯಕನು ವೈದ್ಯರ ಯಾವ ವಸ್ತುಗಳನ್ನು ಹಿಂದಿರುಗಿಸಲು ಹೇಳಿದನು?

ಉ: ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ ನನ್ನನ್ನು ಕ್ಷಮಿಸಿ ಎಂದನು.

೫ ಕಳ್ಳರ ಗುರುವಿನ ಮನ ಪರಿವರ್ತನೆ ಹೇಗಾಯಿತು?

ಉ: ತಾನು ವೈದ್ಯರ ಮನೆಯಲ್ಲಿ ಕಳ್ಳತನ ಮಾಡಿದರೂ, ಅದು ಯಾವುದನ್ನು ಅವರು ನೆನಪಿಸದೆ ವೈದ್ಯರು ತನ್ನ ಮಗುವಿಗೆ ಮದ್ದು ಕೊಟ್ಟದ್ದರಿಂದ ಕಳ್ಳರ ಗುರುವಿನ ಮನ ಪರಿವರ್ತನೆಯಾಯಿತು.

**********

# **ಹೊಂಗೆ ಬೇವುಗಳ ಹಾಡು**

೧ ಬದುಕ ಬದುವ ಬೇಲಿ ಯಾವ ರೀತಿ ಇದೆ?

ಉ: ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಂತೆ, ಮಲ್ಲಿಗೆಯಂತಹ ರೂಪು, ತಾಯಿಯಂತಹ ಬೆರಳಿನ ರೂಪದಲ್ಲಿದೆ.

೨ ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

ಉ: ಹೊಳೆಯ ದಂಡೆಯು ಸಾಲಿನಲ್ಲಿ ರಾಜ್ಯ ಹುಟ್ಟಿ ಸಾಗಿ, ಅದೇ ಸಂತೆ, ಗೊಬ್ಬರದ ಹಾಡು ಹೊಮ್ಮಿದ ನೆನಪುಗಳಿವೆ.

೩ನಾಗರಿಕತೆಯ ಬೆಳವಣಿಗೆಯ ಬಗ್ಗೆ ಕವಯತ್ರಿಗೆ ಯಾವ ಅಳುಕು ಇದೆ?

ಉ: ನಗರಗಳು ಹಳ್ಳಿಗಳ ಸಂಸ್ಕೃತಿಯನ್ನು ಹಾಳು ಮಾಡಿವೆ ಬಗೆ ಬಗೆಯ ಕಾರು, ಬಸ್ಸು, ವಿಮಾನಗಳು ಬದುಕನ್ನು ಮುಗಿಸುತ್ತಿದೆ. ಇಂಧನ ಮುಗಿಯುತ್ತಿದೆ. ನಾಳೆಯ ಬಗ್ಗೆ ಚಿಂತೆ ಕಾಡುತ್ತಿದೆ. ಭವಿಷ್ಯದ ಚಿಂತೆ ಎದುರಾಗಿದೆ.

೪ ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕು?

ಉ: ಹೊಂಗೆ, ಹಿಪ್ಪೆ. ಜೀವಮೇಲನಡೆಯಲಿ, ನಾಳೆ ಎಂಬ ಚಪ್ಪರದ ಕೆಳಗೆಮನುಕುಲದ ಭವ್ಯ ಬದುಕು ಅರಳಬೇಕು.

***************

## ಕೆಳಗಿನ ಪದ್ಯಭಾಗಗಳನ್ನು ಕಂಠಪಾಠ ಮಾಡಿ

## ಬೋಧಿವೃಕ್ಷದ ಹಾಡು

೧ ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

೨ ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು
ಬೆಳ್ಳಿ ಚುಕ್ಕಿ ಬಾನಿನಲ್ಲಿ ಆಗ ತಾನೇ ಬೆಳಗಿತು
ಬೋಧಿ ವೃಕ್ಷದಲ್ಲಿ ಮಹಾ ಬೆಳಕೊಂದು ಕಂಡಿತು

### ಸವಿಚೈತ್ರ

೩ ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

೪ ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು

## ಗುರಿ

೫ ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ
ಬಸಮಾಗು ,ಬಂದ ಮನುಜತೆಯ ಸಾರ್ಥಕತೆಗೆ.

೬ ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

### ವಚನಗಳು

೭ ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ.

೮ ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು  ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

SERVE V CARE

# ಅಲಂಕಾರ

## ಉಪಮಾಲಂಕಾರ

೧ ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ

ಉಪಮಾನ –ಚಂದ್ರ, ಉಪಮೇಯ– ಮಗುವಿನ ಮುಖ

ಉಪಮಾವಾಚಕ–ಅಂತೆ

ಸಮನ್ವಯ: ಮಗುವಿನ ಮುಖವನ್ನು ಚಂದ್ರನಿಗೆ ಹೋಲಿಸಿದ್ದಾರೆ.

೨ ಬಾಳೆಯ ಹಣ್ಣಿನಂತೆ  ಬಾಗಿದ ಕುಣಿಗಲ್ ಕೆರೆ

ಉಪಮೇಯ– ಕುಣಿಗಲ್ ಕೆರೆ

ಉಪಮಾನ–ಬಾಳೆಯ ಹಣ್ಣು

ಉಪಮಾವಾಚಕ –ಅಂತೆ

ಸಮಾನಧರ್ಮ –ಬಾಗಿರುವುದು.

ಸಮನ್ವಯ: ಕುಣಿಗಲ್ ಕೆರೆಯನ್ನು ಬಾಳೆ ಹಣ್ಣಿಗೆ ಹೋಲಿಸಿದ್ದಾರೆ.

## ರೂಪಕಾಲಂಕಾರ

೧ ಸೀತೆಯ ಮುಖ ಕಮಲ ಅರಳಿತು

ಉಪಮೇಯ: ಸೀತೆಯ ಮುಖ

**ಉಪಮಾನ: ಕಮಲ**

ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲ ಎಂದು ವರ್ಣಿಸಲಾಗಿದೆ

ಆದುದರಿಂದ ಇದು ರೂಪಕಾಲಂಕಾರ.

೨ ವನಜ ಮುಖಿ

ಉಪಮೇಯ: ವನಜ

ಉಪಮಾನ : ಮುಖ

ಸಮನ್ವಯ: ಉಪಮೇಯವಾದ ವನಜವನ್ನು ಉಪಮಾನವಾದ ಮುಖವೆಂದು ವರ್ಣಿಸಲಾಗಿದೆ. ಆದುದರಿಂದ ಇದು ರೂಪಕಾಲಂಕಾರ.

# ಪ್ರಬಂಧ

## ಪರಿಸರ ಸಂರಕ್ಷಣೆ

ನಾವು ಮತ್ತು ನಮ್ಮ ಸುತ್ತಮುತ್ತಲಿನ ಬೆಟ್ಟಗುಡ್ಡ, ಕಲ್ಲು, ಮಣ್ಣು ಮರ–ಗಿಡ, ನೀರು, ವಾಯು, ಪ್ರಾಣಿ, ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು.

" ಪರಿಸರ ಉಳಿದರೆ ನಾಡು ಉಳಿದೀತು, ಪರಿಸರ ಅಳಿದರೆ ನಾಡು ಕಳೆದೀತು" ಎಂಬ ಮಾತಿನಂತೆ ನಾಡನ್ನು ರಕ್ಷಿಸಿಕೊಳ್ಳಬೇಕಾದರೆ ಪರಿಸರ ಸಂರಕ್ಷಣೆ ಮಾಡಬೇಕಾದದ್ದು ನಮ್ಮ ಜವಬ್ದಾರಿಯಾಗಿದೆ.

ಪರಿಸರವನ್ನು ನಾಶಮಾಡದೆ, ಉಳಿಸಿ, ಬೆಳೆಸಿ, ಮುಂದಿನ ಜನಾಂಗಕ್ಕೆ ಕೊಡುಗೆಯಾಗಿ ನೀಡಬೇಕೆಂಬುದು ಎಲ್ಲರ ಆಶಯವಾಗಬೇಕು.

## ಕ್ರೀಡೆಗಳ ಮಹತ್ವ

"ಸದೃಢ ದೇಹದಲ್ಲಿ ಸದ್ರಢ ಮನಸ್ಸು  ಇರುತ್ತದೆ" ಎಂಬುದು ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದ ಮಾತಾಗಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಸರಾಗವಾಗಿ ಮಾಡಿಕೊಂಡು ಹೋಗಲು ಆರೋಗ್ಯವಾಗಿರಬೇಕು.

ಬಾಲ್ಯದಲ್ಲಿಯೇ ಸದೃಢದೇಹವನ್ನು ಬೆಳೆಸಿಕೊಳ್ಳಲು ಕ್ರೀಡೆಗಳು ಅತ್ಯಂತ  ಸಹಕಾರಿಯಾಗುತ್ತವೆ. ಆದ್ದರಿಂದ ಶಾಲಾ–ಕಾಲೇಜುಗಳಲ್ಲಿ ಕ್ರೀಡೆಗಳನ್ನು ಆಡಿಸುತ್ತಾರೆ.

ಪ್ರತಿಯೊಬ್ಬರು ಕ್ರೀಡೆಗಳ ಬಗ್ಗೆ ಆಸಕ್ತಿ, ಅಭಿರುಚಿಯನ್ನು ಬೆಳೆಸಿಕೊಂಡು ದೈಹಿಕ ಮತ್ತು ಮಾನಸಿಕವಾಗಿ ಅರೋಗ್ಯವಂತರಾಗಲು ಪ್ರಯತ್ನಿಸಬೇಕು.

## ರಾಷ್ಟ್ರೀಯ ಹಬ್ಬಗಳು

ಒಂದು ದೇಶದ ಏಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ. ರಾಷ್ಟ್ರದ ಜನರೆಲ್ಲರೂ ಯಾವುದೇ ಭೇದಭಾವವಿಲ್ಲದೆ, ಜಾತಿ,ಧರ್ಮ ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು.

ನಮ್ಮ ದೇಶದಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಮೊದಲಾದ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತೇವೆ.

# ಗಾದೆ ಮಾತುಗಳು

**೧ಹಾಸಿಗೆ ಇದ್ದಷ್ಟು ಕಾಲು ಚಾಚು.**

ವೇದ ಸುಳ್ಳಾದರೂ ಗಾದೆ ಸುಳ್ಳಾಗದು .ಗಾದೆ ಮಾತು ಹಿರಿಯರ ಅನುಭವದಿಂದ ಬಂದಿದೆ. ಈ ಮೇಲಿನ ಗಾದೆ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ನಾವು ನಮ್ಮ ಯೋಗ್ಯತೆಗೆತಕ್ಕ ಆಸೆಯನ್ನು ಹೊಂದಬೇಕು. ಇಲ್ಲದಿದ್ದರೆ ತೊಂದರೆಗೆ ಒಳಗಾಗುತ್ತೇವೆ.

ಇಂತಹ ಗಾದೆ ಮಾತುಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿದರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳಬಹುದು.

೨ **'ಅತಿ ಆಸೆ ಗತಿಗೇಡು'**

ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆ ಮಾತು ಹಿರಿಯರ ಅನುಭವದಿಂದ ಬಂದಿದೆ. ಈ ಮೇಲಿನ ಗಾದೆ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ಜನರಿಗೆ ಆಸೆ ಇರಬೇಕು. ದುರಾಸೆ ಇರಬಾರದು. ಅತಿಯಾದ ಅಸೆ ದು:ಖಕ್ಕೆ ಕಾರಣವಾಗುತ್ತದೆ.

ಇಂತಹ ಗಾದೆ ಮಾತುಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿದರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳಬಹುದು.

೩ **'ಕೈ ಕೆಸರಾದರೆ ಬಾಯಿ ಮೊಸರು'**

ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆ ಮಾತು ಹಿರಿಯರ ಅನುಭವದಿಂದ ಬಂದಿದೆ. ಈ ಮೇಲಿನ ಗಾದೆ ಜನಪ್ರಿಯಗಾದೆಗಳಲ್ಲಿ ಒಂದಾಗಿದೆ.

ರೈತರು ಕಷ್ಟ–ಪಟ್ಟು ದುಡಿದಾಗ ಅದಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ. ಆಳಾಗಿ ದುಡಿ ಅರಸನಾಗಿ ಉಣ್ಣು ಎಂಬ ಗಾದೆ ಮಾತಿಗೆ ಸಮಾನವಾದ ಗಾದೆಯಾಗಿದೆ.

ಇಂತಹ ಗಾದೆ ಮಾತುಗಳನ್ನು ನಾವು ನಮ್ಮ ಜೀವನದ್ದಲ್ಲಿ ಅಳವಡಿಸಿದರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳಬಹುದು.

೪ **'ಬೆಳೆಯುವ ಸಿರಿ ಮೊಳಕೆಯಲ್ಲಿ'**

ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆ ಮಾತು ಹಿರಿಯರ ಅನುಭವದಿಂದ ಬಂದಿದೆ. ಈ ಮೇಲಿನ ಗಾದೆ ಜನಪ್ರಿಯ ಗಾದೆಗಳಲ್ಲಿ ಒಂದಾಗಿದೆ.

ಮುಂದೆ ಬೆಳೆಯಬಹುದಾದ ಪೈರಿನ ಗುಣ ಅದು ಮೊಳಕೆ ಬರುವಾಗ ಕಂಡು ಬರುತ್ತದೆ. ಒಬ್ಬ ಸಾಧಕನ ಸಾಧನೆಯ ಗುಣ ಅತನ ಬಾಲ್ಯದಲ್ಲಿಯೇ ಕಂಡುಬರುತ್ತದೆ.

ಇಂತಹ ಗಾದೆ ಮಾತುಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿದರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳಬಹುದು.

# ವ್ಯವಹಾರಿಕ/ ಮನವಿಪತ್ರ

ನಿಮ್ಮನ್ನು ವಿಜಯಪುರದ ಸಂಗಮೇಶ ಎಂದು ಭಾವಿಸಿಕೊಂಡು ನಿಮ್ಮ ಊರಿನ ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ

ರಿಂದ,　　　　　　　　　　　　　　　　ದಿನಾಂಕ: 17.11.2022

ಸಂಗಮೇಶ,

ಕೋಟೆ ಬೀದಿ

ವಿಜಯ ಪುರ –586101,

ರಿಗೆ,

ಜಿಲ್ಲಾಧಿಕಾರಿಗಳು,

ಕೋಟೆಬೀದಿ,

ವಿಜಯಪುರ– 586701.

ಮಾನ್ಯರೇ,

ವಿಷಯ: ಕೋಟೆಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ನೀರಿನ ಸಮಸ್ಯೆ ಇದೆ. ಜನಪರ ಕಾಳಜಿ ಇರುವ ತಾವುಗಳು ದಯಮಾಡಿ ನಮಗೆ ಬೋರ್‌ವೆಲ್ ಹಾಕಿಸಿ ಕೊಡಬೇಕಾಗಿ ಈ ಮೂಲಕ ವಿನಂತಿಸಿ ಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿ,

ಸಂಗಮೇಶ.

ಸ್ಥಳ: ವಿಜಯಪುರ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ರಚನಾ ಎಂದು ಭಾವಿಸಿ ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ನದಿಗಳನ್ನು ಒದಗಿಸುವಂತೆ ಕೋರಿ ಅರಣ್ಯ ಅಧಿಕಾರಿಗಳಿಗೆ ಪತ್ರ ಬರೆಯಿರಿ

ರಿಂದ, ದಿನಾಂಕ:17.11.2022

ರಚನಾ,

ಸರಕಾರಿ ಪ್ರೌಢಶಾಲೆ,

ಹಾಸನ,

ರಿಗೆ,

ಅರಣ್ಯಾಧಿಕಾರಿಗಳು,

ಹಾಸನ ಜಿಲ್ಲೆ,

ಹಾಸನ.

ಮಾನ್ಯರೇ,

ವಿಷಯ: ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ವನಮಹೋತ್ಸವ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ತಾವು ಸಸಿಗಳನ್ನು ಒದಗಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ, ಇತೀ ತಮ್ಮ ವಿಶ್ವಾಸಿ,

ರಚನಾ.

ಸ್ಥಳ: ಹಾಸನ

ನಿಮ್ಮನ್ನು ಧಾರವಾಡದ ಜವಾಹರ ನವೋದಯ ಶಾಲೆಯ ಚಿನ್ಮಯ ಎಂದು ಭಾವಿಕೊಂಡು ನಿಮ್ಮ ಊರಿನ ಬೀದಿ ದೀಪವನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

ದಿನಾಂಕ:17.11.2022

ರಿಂದ,

ಚಿನ್ಮಯ,

ಜವಹಾರ ನವೋದಯ ಶಾಲೆ,

ಧಾರವಾಡ,

ರಿಗೆ,

ಅಧ್ಯಕ್ಷರು,

ಗ್ರಾಮ ಪಂಚಾಯತಿ,

ಧಾರವಾಡ.

ಮಾನ್ಯರೇ,

ವಿಷಯ: ಊರಿನ ಬೀದಿ ದೀಪವನ್ನು ಸರಿಪಡಿಸುವಂತೆ ಕೋರಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಊರಿನ ಬೀದಿ ದೀಪಗಳು ಕೆಲವು ದಿನಗಳಿಂದ ಕೆಟ್ಟು ಹೋಗಿದೆ. ಇದರಿಂದ ರಾತ್ರಿ ಹೋಗಲು ಕಷ್ಟವಾಗಿದೆ. ಆದ್ದರಿಂದ ತಾವುಗಳು ನಮ್ಮ ಗ್ರಾಮದ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿ,

ಚಿನ್ಮಯ.

ನಿಮ್ಮನ್ನು ಶ್ರೀರಂಗಪಟ್ಟಣದ ಸರ್ಕಾರಿ ಪ್ರೌಢ ಶಾಲೆಯ ಕೀರ್ತಿ ಕುಮಾರ್ ಎಂದು ಭಾವಿಸಿಕೊಂಡು ಹಾಸನದಲ್ಲಿರುವ ನಿಮ್ಮ ತಂದೆಗೆ ಶಾಲಾ ಶೌಲ್ಕ ಕಟ್ಟಲು 150ರೂಪಾಯಿಗಳನ್ನು ಕೋರಿ ಒಂದು ಪತ್ರ ಬರೆಯಿರಿ.

ಇವರಿಂದ, ದಿನಾಂಕ: 20.12.2022

ಕೀರ್ತಿಕುಮಾರ,

೯ನೇ ತರಗತಿ,

ಸರಕಾರಿ ಪ್ರೌಢ ಶಾಲೆ,

ಶ್ರೀ ರಂಗಪಟ್ಟಣ.

ತೀರ್ಥರೂಪರಿಗೆ ನಿಮ್ಮ ಮಗನು ಮಾಡುವ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನಿಮ್ಮ ಮತ್ತು ಅಮ್ಮನ ಆರೋಗ್ಯದ ಬಗ್ಗೆ ಪತ್ರ ಬರೆಯಿರಿ.ನಾನು ಇಲ್ಲಿ ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ.ಪತ್ರದ ಮುಖ್ಯ ವಿಚಾರವೆಂದರೆ ಜನವರಿ 10ನೇ ತಾರೀಕಿನ ಒಳಗಾಗಿ ವಾರ್ಷಿಕ ಪರೀಕ್ಷೆ ಶುಲ್ಕ150 ರೂಪಾಯಿಯನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ನಮಸ್ಕಾರಗಳೊಂದಿಗೆ , ನಿಮ್ಮ ಪ್ರೀತಿಯ ಮಗ,

ಕೀರ್ತಿಕುಮಾರ,

## ವ್ಯಾಕರಣಗಳು

**ಸಂಧಿಗಳು:**

**ಲೋಪಸಂಧಿ**

೧ ಮತ್ತೆ +ಒಬ್ಬ = ಮತ್ತೊಬ್ಬ

೨ ಊರು+ ಊರು =ಊರೂರು

೩ ಬೇರೆ + ಒಬ್ಬ =ಬೇರೊಬ್ಬ

೪ ಮಾತು+ ಇಲ್ಲ = ಮಾತಿಲ್ಲ

**ಆಗಮ ಸಂಧಿ**

೧ ಮನೆ+ಅನ್ನು = ಮನೆಯನ್ನು

೨ ಗುಣ+ ಇಲ್ಲ= ಗುಣವಿಲ್ಲ

೩ ಕಾಶಿ+ ಅಲ್ಲಿ = ಕಾಶಿಯಲ್ಲಿ

೪ ಮರ+ ಅನ್ನು = ಮರವನ್ನು

**ಆದೇಶಸಂಧಿ**

೧ ಕಣ್+ ಪನಿ = ಕಂಬನಿ

೨ ಮಳೆ+ ಕಾಲ = ಮಳೆಗಾಲ

೩ ಹೂ+ಬುಟ್ಟಿ = ಹೂಬುಟ್ಟಿ

೪ ಬೆಟ್ಟ+ತಾವರ = ಬೆಟ್ಟದಾವರೆ

**ಸವರ್ಣ ಧೀರ್ಘಸಂಧಿ**

೧ ದೇವ+ಆಲಯ = ದೇವಾಲಯ

೨ ವಿದ್ಯಾ+ಅಭ್ಯಾಸ= ವಿದ್ಯಾಭ್ಯಾಸ

೩ ಸರ್ವ+ಅಧಿಕಾರಿ=ಸರ್ವಾಧಿಕಾರಿ

೪ ಪಂಚ+ಅಕ್ಷರಿ =ಪಂಚಾಕ್ಷರಿ

**<u>ಗುಣಸಂಧಿ</u>**

೧ ಮಹಾ+ಉತ್ಸವ =ಮಹೋತ್ಸವ

೨ ಗಜ+ಇಂದ್ರ = ಗಜೇಂದ್ರ

೩ ಮಹ+ಋಷಿ=ಮಹರ್ಷಿ

**<u>ಸಮಾಸ</u>**

**<u>ತತ್ಪುರುಷ ಸಮಾಸ</u>**

೧ ಅರಸನ+ಮನೆ= ಅರಮನೆ

೨ ಮರದ+ಕಾಲು =ಮರಗಾಲು

೩ ಹಿಮದ +ಮಣಿ = ಹಿಮಮಣಿ

**<u>ಕರ್ಮಾಧಾರಯ ಸಮಾಸ</u>**

೧ ಕೆಂಪಾದ +ತಾವರೆ = ಕೆಂದಾವರೆ

೨ ಹಿರಿದಾದ+ ಗುರಿ= ಹೆಗ್ಗುರಿ

೩ ಹಿರಿದಾದ +ಮರ= ಹೆಮ್ಮರ

**<u>ಕ್ರಿಯಾ ಸಮಾಸ</u>**

೧ ಕೈಯನ್ನು+ಹಿಡಿ = ಕೈಹಿಡಿ

೨ ಮೈಯನ್ನು +ತೊಳೆ = ಮೈದೊಳೆ

೩ ಮೈಯನ್ನು+ಕೊಡವಿ=ಮೈಕೊಡವಿ

**<u>ಅಂಶಿ ಸಮಾಸ</u>**

೧ ರಾತ್ರಿಯ+ಮಧ್ಯ = ಮಧ್ಯ ರಾತ್ರಿ

೨ ತಲೆಯ+ ಹಿಂದೆ =ಹಿಂದಲೆ

೩ ತಲೆಯ+ ಮುಂದೆ =ಮುಂದಲೆ